ಬೆಲೆ ರೂ.2.50
D.O.P - 15th of every month at Udupi Sorting Office

ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ
ನಿಮ್ಮ ಮೊಬೈಲ್‌ಗೆ
STHANIKA
PLAY STOREನಿಂದ STHANIKA ಆ್ಯಪನ್ನು ಡೌನ್‌ಲೋಡ್ ಮಾಡಿಕೊಳ್ಳಿ
ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ

# ಶ್ರೀ ಶಾರದಾ

ಮಾಸಪತ್ರಿಕೆ – 15 ಮಾರ್ಚ್ 2019

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ–19 ಸಂಚಿಕೆ–3 ಪುಟಗಳು–8 Registered Under No.UDP/1260/2018-2020 Licenced to Post without Prepayment Licence No. SK/WPP/UDP/81/2018-20

## ಶಾರದಾ ಮಂಟಪದಲ್ಲಿ ಶಿವರಾತ್ರಿ





ತಾ.04–03–2019ರಂದು ಶಿವರಾತ್ರಿಯನ್ನು ವಿಶೇಷವಾಗಿ ಶ್ರೀ ಶಾರದಾ ಮಂಟಪದಲ್ಲಿ ಆಚರಿಸಲಾಯಿತು. ಈ ಬಾರಿ ಶಿವರಾತ್ರಿ ಸೋಮವಾರವಾಗಿದ್ದುದು ವಿಶೇಷವಾಗಿತ್ತು. ಅಂದು ಬೆಳಿಗ್ಗೆ 8 ಗಂಟೆಗೆ ಶ್ರೀಶಾರದಾ ದೇವಸ್ಥಾನದಲ್ಲಿ ಪ್ರಾರ್ಥನೆಯೊಂದಿಗೆ ಧಾರ್ಮಿಕ ಕಾರ್ಯಕ್ರಮಗಳು ಆರಂಭವಾದವು. ಸಂಘದ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್, ಕಾರ್ಯದರ್ಶಿಗಳಾದ ಶ್ರೀ ಯು. ಅರವಿಂದ ಕುಮಾರ್, ಕೋಶಾಧಿಕಾರಿ ಶ್ರೀ ಬಿ. ಜಯರಾಮರಾವ್ ಹಾಗೂ ಇತರ ಪದಾಧಿಕಾರಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಬ್ರಹ್ಮಶ್ರೀ ಸುಬ್ರಹ್ಮಣ್ಯ ಉಪಾಧ್ಯಾಯರು ರುದ್ರಾಭಿಷೇಕವನ್ನು ವಿಧಿಯುಕ್ತವಾಗಿ ನೆರವೇರಿಸಿದರು. ಸ್ವಾಧ್ಯಾಯ ತಂಡದವರಿಂದ ಪಾರಾಯಣ ನೆರವೇರಿತು. ಸುಮಾರು ಹತ್ತುಗಂಟೆಗೆ ಮುಖ್ಯಸಭಾಭವನದಲ್ಲಿ ಉಡುಪಿ ಶ್ರೀ ಶಾರದಾ ಭಜನಾ ತಂಡ, ಪಡುಬಿದ್ರೆ ಶ್ರೀ ಸ್ಥಾನಿಕ ಬ್ರಾಹ್ಮಣ ಸಭಾದ ಮಹಿಳಾ ಸದಸ್ಯರಿಂದ ಹಾಗೂ ಬ್ರಹ್ಮಾವರದ ಮಹಿಳಾ ಸದಸ್ಯರಿಂದ ಶಿವಭಕ್ತಿ ಗೀತೆಗಳ ಭಜನಾ ಕಾರ್ಯಕ್ರಮ ನೆರವೇರಿತು. ಶ್ರೀಮತಿ ಯಶೋದಾ ಕೋಲ್ಪೆ ಹಾಗೂ ಶ್ರೀ ವೈ ರವೀಂದ್ರನಾಥರವರು ಹಾರ್ಮೋನಿಯಂನಲ್ಲಿ ಸಾಥ್ ನೀಡಿದರು. ಸಂಘದ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್, ಸಲಹೆಗಾರರಾದ ಶ್ರೀ ವೈ. ಭುವನೇಂದ್ರ ರಾವ್, ಶ್ರೀ ಕೆ. ಸುಧಾಕರ ರಾವ್ ಮತ್ತು ಶ್ರೀ ಬಿ.ಕೃಷ್ಣಮೂರ್ತಿ ರಾವ್‌ರವರು ಭಜನಾ ತಂಡದ ಸದಸ್ಯೆಯರಿಗೆ ಶಾಲುಹೊದಿಸಿ ಸ್ಮರಣಿಕೆ ಹಾಗೂ ಕಿರುಕಾಣಿಕೆಯಿತ್ತು ಸನ್ಮಾನಿಸಿದರು. ನಂತರ ಶ್ರೀ ಶಾರದಾ ದೇವಸ್ಥಾನದಲ್ಲಿ ಮಹಾಪೂಜೆ ನೆರವೇರಿತು. ಮಧ್ಯಾಹ್ನದ ಫಲಾಹಾರ ಪ್ರಸಾದದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

## ಬ್ರಹ್ಮಶ್ರೀ ಪಾವಂಜೆ ವಾಸುದೇವ ಉಪಾಧ್ಯಾಯ ನಿಧನ



ನಮ್ಮ ಸಮಾಜದ ಹಿರಿಯ ವೇದವಿದ್ಯಾಪಾರಂಗತರಾದ ಬ್ರಹ್ಮಶ್ರೀ ವಾಸುದೇವ ಉಪಾಧ್ಯಾಯರು ತಾ 12–02–2019 ರಂದು ನಿಧನ ಹೊಂದಿದರು. ಅವರಿಗೆ 77 ವರ್ಷ ವಯಸ್ಸಾಗಿದ್ದು ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದರು. ಇವರ ನಿಧನದಿಂದ ನಮ್ಮ ಸಮಾಜವು ಧಾರ್ಮಿಕರಂಗದ ಮೇರು ವ್ಯಕ್ತಿಯೋರ್ವರನ್ನು ಕಳೆದುಕೊಂಡಿದೆ.

ಶ್ರೀಯುತರು 1943ನೇ ಇಸವಿಯಲ್ಲಿ ಈಶ್ವರ ಉಪಾಧ್ಯಾಯ ಹಾಗೂ ರುಕ್ಮಿಣಿಯಮ್ಮ ದಂಪತಿಗಳ ಪುತ್ರನಾಗಿ ಪಾವಂಜೆಯಲ್ಲಿ ಜನಿಸಿದರು. ಎಂಟನೆಯ ತರಗತಿಯವರೆಗೆ ಆಧುನಿಕ ಶಿಕ್ಷಣವನ್ನು ಪೂರೈಸಿದ್ದ ಅವರು ಶೃಂಗೇರಿ ಜಗದ್ಗುರುಗಳಾಗಿದ್ದ ಶ್ರೀ ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರು ಪಾವಂಜೆಗೆ ಭೇಟಿಯಿತ್ತ ಸಂದರ್ಭದಲ್ಲಿ ಪ್ರಭಾವಿತರಾಗಿ ಪಾವಂಜೆಯ ಸಂಸ್ಕೃತ ಪಾಠಶಾಲೆಯಲ್ಲಿ ವಿದ್ಯಾಭ್ಯಾಸ ಮುಂದುವರಿಸಿ "ಸಂಸ್ಕೃತ ವಿಶಾರದ" ಪದವಿಯನ್ನು ಪಡೆದರು. ನಂತರ ಸನಾತನ ಧರ್ಮದ ವಿವಿಧ ಶಾಸ್ತ್ರಗಳನ್ನು ಅಭ್ಯಸಿಸುತ್ತಾ ಪಾವಂಜೆ ದೇವಸ್ಥಾನದಲ್ಲಿ ಅರ್ಚಕರಾಗಿ ಹಾಗೂ ಮುಂದೆ ಮೊಕ್ತೇಸರರಾಗಿಯೂ ಸೇವೆ ಸಲ್ಲಿಸಿದರು. ಅವಿಭಜಿತ ದಕ್ಷಿಣಕನ್ನಡ ಜಿಲ್ಲೆಯ ಹಲವಾರು ದೇವಸ್ಥಾನಗಳಲ್ಲಿ ಯಜ್ಞಯಾಗಾದಿಗಳನ್ನು, ಬ್ರಹ್ಮಕಲಶೋತ್ಸವಾದಿ ಉತ್ಸವಗಳನ್ನು ವಿಧಿಯುಕವಾಗಿ ನಡೆಸಿಕೊಟ್ಟು ಅಪಾರ ಸಂಖ್ಯೆಯ ಶಿಷ್ಯರನ್ನು ಪಡೆದಿದ್ದರು. ಶ್ರೀ ಶೃಂಗೇರಿ ಜಗದ್ಗುರುಗಳಿಂದ ನಿಯುಕ್ತರಾಗಿ ತಿರುಪತಿಯಲ್ಲಿ ಋಕ್ಸಂಹಿತಾ ಯಾಗದ ಪ್ರಧಾನ ಋತ್ವಿಜರಾಗಿಯೂ ಹಾಗೂ ಕೊಯಮುತ್ತೂರಿನಲ್ಲಿ ನಡೆದ ಅತಿರುದ್ರ ಯಾಗದಲ್ಲಿಯೂ ಭಾಗವಹಿಸಿದ್ದರು.

ಶ್ರೀಯುತರೊಂದಿಗೆ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ ಕುಂಜಿಬೆಟ್ಟು ಇದರ ಸಂಬಂಧ ಐವತ್ತು ವರ್ಷಗಳಷ್ಟು ಹಳೆಯದು. ಸಂಘದ ಕಾರ್ಯಕ್ರಮಗಳಿಗೆ ಶ್ರೀಯುತರೇ ಪ್ರಧಾನ ಋತ್ವಿಜರು ಹಾಗೂ ನಮ್ಮ ಎಲ್ಲಾ ಕಾರ್ಯಕ್ರಮಗಳಿಗೆ ಧಾರ್ಮಿಕ ವಿಚಾರದಲ್ಲಿ ಅವರ ಸಲಹೆ ಪಡೆದೇ ಮುಂದುವರಿಯುವುದು ನಮಗೆ ರೂಢಿಯಾಗಿತ್ತು. ಅವರನ್ನು ಸಂಘದ ಸುವರ್ಣ ಸಂಭ್ರಮದ ಸಂದರ್ಭದಲ್ಲಿ ಸನ್ಮಾನಿಸಿದ್ದೆವು. ಅವರ ಪರವಾಗಿ ಅವರ ಪುತ್ರ ಶ್ರೀ ಜಗದೀಶ ಉಪಾಧ್ಯಾಯರು ಸನ್ಮಾನ ಸ್ವೀಕರಿಸಿದ್ದರು. ಶ್ರೀಯುತರ ನಾಲ್ವರು ಪುತ್ರರೂ ವೇದವಿದ್ಯಾಪಾರಂಗತರಾಗಿದ್ದು ಅವರ ಹಾದಿಯಲ್ಲೇ ಮುನ್ನಡೆಯುತ್ತಾ ಸಮಾಜಕ್ಕೆ ಮಾರ್ಗದರ್ಶನ ನೀಡುತ್ತಿದ್ದಾರೆ. ಪಾವಂಜೆ ವಾಸುದೇವ ಉಪಾಧ್ಯಾಯರ ನಿಧನಕ್ಕೆ ಸಂಘವು ಸಂತಾಪ ಸೂಚಿಸುತ್ತಾ ಅವರ ಕುಟುಂಬಕ್ಕೆ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಶ್ರೀ ಶಾರದೆಯು ನೀಡಲಿ ಎಂದು ಪ್ರಾರ್ಥಿಸುತ್ತದೆ

**ಓದುಗರಿಗೆ ಚಾಂದ್ರಮಾನ ಯುಗಾದಿ ಹಾಗೂ ಸೌರಮಾನ ಯುಗಾದಿಗಳ ಶುಭಾಶಯಗಳು.**
**ವಿಕಾರಿನಾಮ ಸಂವತ್ಸರದಲ್ಲಿ ಎಲ್ಲಾ ಸಮಾಜ ಬಾಂಧವರಿಗೆ**
**ಶ್ರೇಯಸ್ಸಾಗಲೆಂದು ಹಾರೈಸುತ್ತೇವೆ.**

## ಶ್ರೀಶಾರದಾ ದೇವಸ್ಥಾನ

**ಶ್ರೀ ಶಾರದಾ ಮಂಟಪ, ಶ್ರೀಶಾರದಾನಗರ, ಕುಂಜಿಬೆಟ್ಟು, ಉಡುಪಿ–2.**



ಪ್ರಿಯರೇ,

ಸ್ವಸ್ತಿ ಶ್ರೀ ವಿಕಾರಿ ನಾಮ ಸಂ|ರದ
ಚೈತ್ರ ಶುಕ್ಲ 1ಯು **ತಾ.06-04-2019ನೇ ಶನಿವಾರದಿಂದ**
ಚೈತ್ರ ಶುಕ್ಲ 9ಯು **ತಾ.13-04-2019ನೇ ಶನಿವಾರದ ತನಕ**
**ಕಿರುನವರಾತ್ರಿ ಉತ್ಸವವು** ಜರಗಲಿರುವುದು.
ಈ ಪ್ರಯುಕ್ತ ಪ್ರತಿದಿನ ಸಂಜೆ ದೇವಿಗೆ ವಿಶೇಷ ಪೂಜೆ ನೆರವೇರಲಿದೆ.

**ತಾ.13-04-2019ನೇ ಶನಿವಾರ ಸಂಜೆ ಗಂಟೆ 5-00ರಿಂದ**

**ಸಾಮೂಹಿಕ ಶ್ರೀದುರ್ಗಾನಮಸ್ಕಾರ ಪೂಜೆಯು**

**ನೆರವೇರಲಿದೆ. ಪಾಲ್ಗೊಳ್ಳಲಿರುವ ಭಕ್ತಾದಿಗಳು ಸೇವಾ ರೂಪದಲ್ಲಿ ಪೂಜೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.**

**ದುರ್ಗಾಮಾತೆಗೆ ಅರ್ಪಿಸಲು ಹಣ್ಣು, ಹೂವು ಇತ್ಯಾದಿಗಳನ್ನು ಪೂಜಾರಂಭಕ್ಕೆ ಮೊದಲು ತಂದು ನೀಡಬಹುದು. ಅಪರಾಹ್ನ 3ರಿಂದ ದೀಪವಿಟ್ಟು ಮಂಡಲ ರಚನೆ, ಸಂಜೆ 5 ರಿಂದ ಸೇವಾ ಕರ್ತೃಗಳಿಂದ ಪೂಜಾ ಸಂಕಲ್ಪ, ಭಕ್ತರು ಹಾಗೂ ಋತ್ವಿಜರಿಂದ ಸಪ್ತಶತಿ ಪಾರಾಯಣ, ಸಹಸ್ರನಾಮ ಪಾರಾಯಣ, ಅಷ್ಟೋತ್ತರ ಕುಂಕುಮಾರ್ಚನೆ, ಪುಷ್ಪಾಂಜಲಿ ನಮಸ್ಕಾರ, ಮಹಾಪೂಜೆ, ತೀರ್ಥಪ್ರಸಾದ ವಿತರಣೆ, ಭೋಜನ ಪ್ರಸಾದ ವಿಧಿಗಳು ನಡೆಯಲಿವೆ. ಸೇವಾ ಶುಲ್ಕ ರೂ.150/-**

**– ಆಡಳಿತ ಮಂಡಳಿ**


ತಂತ್ರಾಡಿ ವಿಶ್ವನಾಥ ಶಾನುಭೋಗ್
☎ 94487 24161
97417 85551
ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು ಉಡುಪಿ – 576102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

# ಸಂಪಾದಕೀಯ.....

**- ಡಾ। ವೈ. ಸುದರ್ಶನ್ ರಾವ್**

ಕ್ರಿಸ್ತಪೂರ್ವ ಮೂರನೆಯ ಶತಮಾನದಲ್ಲಿ ಭಾರತ ದೇಶವನ್ನು ಆಳಿದವನು ಸಾಮ್ರಾಟ ಅಶೋಕ. ಅವನು ಬಹಳ ಮಹಾತ್ವಾಕಾಂಕ್ಷಿ ಹಾಗೂ ಅಷ್ಟೇ ಪರಾಕ್ರಮಿಯಾದ ಅರಸನಾಗಿದ್ದ. ತನ್ನ ಭುಜಬಲದಿಂದ ಇರಾನ್ ಅಫಘಾನಿಸ್ಥಾನದಿಂದ ಹಿಡಿದು ಬಾಂಗ್ಲಾ ಬರ್ಮಾ ದೇಶಗಳ ತನಕ ಹಾಗೂ ದಕ್ಷಿಣದಲ್ಲಿ ಮೈಸೂರಿನ ತನಕ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿಕೊಂಡಿದ್ದ. ಕಳಿಂಗ ಯುದ್ಧವು ಈತನು ತನ್ನ ಸಾಮ್ರಾಜ್ಯದ ವಿಸ್ತರಣೆಗೆ ಮಾಡಿದ ಪ್ರಸಿದ್ಧ ಯುದ್ಧಗಳಲ್ಲೊಂದು. ಈ ರಾಜ್ಯವನ್ನು ಅವನು ತನ್ನ ಪರಾಕ್ರಮದಿಂದ ಗೆದ್ದನಾದರೂ, ನಿಜಾರ್ಥದಲ್ಲಿ ಅವನು ತನ್ನ ಅಂತರಾತ್ಮಕ್ಕೆ ಸೋತ ಯುದ್ಧವಿದು. ಈ ಯುದ್ಧದಲ್ಲಾದ ಸಾವು ನೋವುಗಳು ಅವನ ಮನ:ಪರಿವರ್ತನೆ ಮಾಡಿದವು. ಈ ಯುದ್ಧದ ಬಳಿಕ ಅವನು ದಿಗ್ವಿಜಯಗಳ ಮೂಲಕ ಸಾಮ್ರಾಜ್ಯ ವಿಸ್ತರಣೆ ಮಾಡುವುದನ್ನು ನಿಲ್ಲಿಸಿ ಅಹಿಂಸೆಯನ್ನು ಪ್ರತಿಪಾದಿಸುವ ಬೌದ್ಧ ಧರ್ಮವನ್ನು ಸ್ವೀಕರಿಸಿದ. ತನ್ನ ಜೀವನವನ್ನು ಬುದ್ಧನ ಸಂದೇಶಗಳನ್ನು ಜನರಿಗೆ ತಲುಪಿಸಲು ಮುಡಿಪಾಗಿಟ್ಟ. ಹಲವಾರು ಕಡೆಗಳಲ್ಲಿ ಬುದ್ಧನ ದೇವಾಲಯಗಳನ್ನು ಸ್ಥಾಪಿಸಿದ, ಅವನ ಸಂದೇಶಗಳನ್ನು ಬರೆಸಿ ಸ್ಥೂಪಗಳನ್ನು ನಿಲ್ಲಿಸಿದ. ಹಲವಾರು ದೇಶಗಳಿಗೆ ಬುದ್ಧಬಿಕ್ಷುಗಳನ್ನು ಕಳುಹಿಸಿ ಧರ್ಮ ಪ್ರಚಾರವನ್ನು ಮಾಡಿದ. ಬೌದ್ಧ ಧರ್ಮವನ್ನು ಪ್ರಚಾರಮಾಡಲೆಂದು ಶ್ರೀಲಂಕಾ ದೇಶಕ್ಕೆ ಸ್ವತಃ ತನ್ನ ಮಕ್ಕಳಾದ ಮಹೀಂದ್ರ ಹಾಗೂ ಸಂಘಮಿತ್ರೆಯರನ್ನೇ ಕಳುಹಿಸುವಷ್ಟು ನಿಷ್ಠೆಯನ್ನು ಬೌದ್ಧ ಧರ್ಮದ ಮೇಲೆ ತೋರ್ಪಡಿಸಿದ. ಹೀಗೆ ಅಶೋಕನ ಕಾಲದಲ್ಲಿ ಬೌದ್ಧ ಧರ್ಮವು ಭಾರತ, ಜಪಾನ್, ಚೀನ, ಥೈಲ್ಯಾಂಡ್, ಬರ್ಮಾ, ಶ್ರೀಲಂಕಾಗಳಲ್ಲಿ ರಾಜಧರ್ಮವಾಗಿ ಪಸರಿಸಿತು. ಇದನ್ನು ಧರ್ಮದಿಗ್ವಿಜಯವೆಂದು ಇತಿಹಾಸಕಾರರು ಕರೆಯುತ್ತಾರೆ.

ಅಶೋಕನ ನಂತರ ಅವನು ಯುದ್ಧದಲ್ಲಿ ಗೆದ್ದ ಸಾಮ್ರಾಜ್ಯ ಏನಾಯಿತು? ಎಷ್ಟು ವರ್ಷ ಕಾಲ ಅದು ಒಂದಾಗಿ ಇತ್ತು? ಎಂಬುದು ಯಾರಿಗೂ ತಿಳಿಯದು. ಅವನ ಕಾಲಾನಂತರ ಅಥವಾ ಅವನು ಜೀವಂತವಿದ್ದಾಗಲೇ ಭುಜಗಳ ಶಕ್ತಿ ಉಡುಗಿದಂತೆ ಒಂದೊಂದೇ ರಾಜ್ಯಗಳು ಸಾಮ್ರಾಜ್ಯದಿಂದ ಕಳಚಿಕೊಂಡವು. ಇದು ಅವನು ಯುದ್ಧದ ಮುಖಾಂತರ ಸ್ಥಾಪಿಸಿದ ಸಾಮ್ರಾಜ್ಯದ ಕಥೆ. ಆದರೆ ಅವನು ಧರ್ಮದಿಗ್ವಿಜಯದ ಮುಖಾಂತರ ಸ್ಥಾಪಿಸಿದ ಸಾಮ್ರಾಜ್ಯ ಮಾತ್ರ ಇಂದಿಗೂ ಅಳಿಯದೇ ಇದೆ. ಕಳೆದ ವರ್ಷ ನಾನು ಶ್ರೀಲಂಕಾ ದೇಶಕ್ಕೆ ಭೇಟಿಯಿತ್ತಾಗ ಅಲ್ಲಿ ಮಹೀಂದ್ರಾ ಹಾಗೂ ಸಂಘಮಿತ್ರೆಯರು ಭಾರತದಿಂದ ತಂದು ನೆಟ್ಟಿದ್ದ ಭೋಧಿವೃಕ್ಷದ ಬಳಿ ಅವರಿಬ್ಬರ ಆಳೆತ್ತರದ ಚಿನ್ನದ ಪುತ್ಥಳಿಗಳನ್ನು ಇಟ್ಟು ಪೂಜಿಸುತ್ತಿರುವುದನ್ನು ಕಂಡೆ. ಇದು ಇಡೀ ವಿಶ್ವದಲ್ಲಿ ಯಾವ ತೋಳ್ಬಲಕ್ಕೂ ಸಲ್ಲದ ಗೌರವ. ಇಪ್ಪತ್ತಮೂರು ಶತಮಾನಗಳು ಕಳೆದರೂ ವಿದೇಶದಿಂದ ಬಂದ ವ್ಯಕ್ತಿಯೊಬ್ಬನು ಪರಕೀಯನೆನೆಸಿಕೊಳ್ಳದೇ ಇಂತಹಾ ಗೌರವವನ್ನು ಪಡೆದುಕೊಳ್ಳಲು ಕೇವಲ ಧರ್ಮದಿಗ್ವಿಜಯದಿಂದ ಮಾತ್ರ ಸಾಧ್ಯ. ಅಷ್ಟು ಮಾತ್ರವಲ್ಲ ಜಪಾನ್, ಬರ್ಮಾ, ಶ್ರೀಲಂಕಾಗಳು ತಮ್ಮ ಸಂಸ್ಕೃತಿ ಹಾಗೂ ಅಸಿತ್ವವನ್ನು ಉಳಿಸಿಕೊಂಡಿರುವುದೂ ಹಾಗೂ ಪರಸ್ಪರ ಸ್ನೇಹದಲ್ಲಿರುವುದು ಈ ಧರ್ಮದ ಕಾರಣದಿಂದಲೇ.

ಶ್ರೀ ಶಂಕರಾಚಾರ್ಯರು ಭಾರತ ದೇಶವನ್ನು ಅಖಂಡವಾಗಿ ಉಳಿಸಿದ್ದು ಸಹಾ ಧರ್ಮದಿಗ್ವಿಜಯದ ಮೂಲಕವೇ. ಅವರು ಈ ದೇಶದ ಉದ್ದಗಲಕ್ಕೂ ಮೂರು ಬಾರಿ ಕಾಲ್ನಡಿಗೆಯಲ್ಲಿ ಸಂಚರಿಸಿ ಸನಾತನ ಧರ್ಮವನ್ನು ದೇಶದುದ್ದಗಲಕ್ಕೂ ಉದ್ಧರಿಸಿದ್ದುದರಿಂದಲೇ ನಮ್ಮ ಭಾರತ ದೇಶ ಇಷ್ಟರ ಮಟ್ಟಿಗಾದರೂ ನಮಗೆ ಉಳಿದುಕೊಂಡಿದೆ. ಇದು ನಮಗೂ ಪಾಠವಾಗಬೇಕು. ಈ ದೇಶ ಭಾರತವಾಗಿಯೇ ಇನ್ನೂ ಹತ್ತು ಶತಮಾನ ಉಳಿಯಬೇಕಾದರೆ ಧರ್ಮಸಂರಕ್ಷಣೆಯಾಗಲೇಬೇಕು. ಯಾವ ಬೆಲೆ ತೆತ್ತಾದರೂ ಅಡ್ಡಿಯಿಲ್ಲ ಯಾವ ತ್ಯಾಗವನ್ನು ಮಾಡಿದರೂ ಅಡ್ಡಿಯಿಲ್ಲ, ನಾವು ನಮ್ಮ ಸಂಸ್ಕೃತಿಯನ್ನು ಹಾಗೂ ನಮ್ಮ ಧರ್ಮವನ್ನು ಉಳಿಸಿಕೊಳ್ಳಲೇಬೇಕು. ನಮ್ಮ ಸಂಸ್ಕೃತಿಯ ಉಳಿವು ದೇಶದ ಉಳಿವು.

ಚುನಾವಣೆ ಹತ್ತಿರ ಬರುತ್ತಿದೆ. ಇಂದಿನ ಚುನಾವಣೆಯು ಹಿಂದಿನ ಕಾಲದಲ್ಲಿ ರಾಜಮಹಾರಾಜರು ಮಾಡುತ್ತಿದ್ದ ಯುದ್ಧಕ್ಕೆ ಸಮಾನ. ನಾವು ಇದರಲ್ಲಿ ಕಾಲಾಳುಗಳು. ಚುನಾವಣೆಯಲ್ಲಿ ನಾವು ಹಾಕುವ ಮತವು ಒಬ್ಬೊಬ್ಬ ವೈರಿಯನ್ನು ಹತಮಾಡಿದಂತೆ. ಬನ್ನಿ ಚುನಾವಣೆಯಲ್ಲಿ ಪಾಲ್ಗೊಳ್ಳಿ. ನಿಮ್ಮ ಅಮೂಲ್ಯವಾದ ಮತವನ್ನು ಚಲಾಯಿಸಿ ಈ ದೇಶವನ್ನು ಉಳಿಸಿಕೊಳ್ಳಿ.

**ಸಂಪಾದಕ ಮಂಡಳಿ**

ಡಾ। ವೈ. ಸುದರ್ಶನ ರಾವ್, ಕುಕ್ಕಿಕಟ್ಟೆ
ಶ್ರೀ ಸುರೇಶ್ ಶ್ಯಾನುಭಾಗ್, ಇಂದ್ರಾಳಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ಪ್ರಭಾಕರ ಭಂಡಿ, ಪೆರ್ಡೂರು
ಶ್ರೀ ವೈ. ಭುವನೇಂದ್ರ ರಾವ್, ಕೊರಂಗ್ರಪಾಡಿ

*Power Cut !!!???*
*Install Best Quality Inverters...*
Mobile : 9483242111
K.Suresh Rao : 9036443884
Tel : 0820-2523436



**DEEPA ENTERPRISES**
Business Complex, Ground Floor,
Near Telephone Exchange, Hotel Udupi Residency Road,
Udupi-576101.
Inverters, UPS, Batteries, Repairs Maintenance & Charging

*With Best Compliments from :*



**Dr. Sanath S. Rao**
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST
Clinic : 0820-6529474
Mobile : 9886093199
drsanathrao@gmail.com

**JALAJA SKIN CARE AND COSMETOLOGY CLINIC**
Sai Harsha Square, Koladapete (Thenkapete), Old Post Office Road, Udupi - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.
Also available at Lalith Hospital (12-30 a.m. to 2-00 p.m.)

**ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)**
ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
**"ಗೃಹ ಸಾಲ"**
ಸಂಘದ ಪ್ರಾಥಮಿಕ ಸದಸ್ಯರಿಗೆ 11.50%
(ಷರತ್ತುಗಳು ಅನ್ವಯ)

| | | |
|---|---|---|
| ವಾಹನ ಸಾಲ | : | 12.5% |
| ಹಳೆಯ ವಾಹನ | : | 14% |
| ಆಭರಣ ಸಾಲ | : | 12.5% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 13% |

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 9.5% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2011-12ರಿಂದ 2016-17ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ
ಪ್ರಧಾನ ಕಛೇರಿ (☎ 2522408) ಕುಕ್ಕಿಕಟ್ಟೆ ಶಾಖೆ (☎ 2592133) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114)





**ವೃಂದಾವನ್ ನೆಸ್ಟ್**
ಶುದ್ಧ ಸಸ್ಯಾಹಾರಿ
ಎನ್.ಎಚ್. 66, ಕಟಪಾಡಿ, ಉಡುಪಿ
ನೂತನ ಸುಸಜ್ಜಿತ ವಿಶಾಲ ಉಪಾಹಾರ ಗೃಹ



ಸಮಯ ಬೆಳಗ್ಗೆ 7:00 ರಿಂದ ರಾತ್ರಿ 10:30 ರ ವರೆಗೆ

ಆದರದ ಸ್ವಾಗತ ಬಯಸುವ


ಹೋಟೇಲ್ ವೃಂದಾವನ, ಕದ್ರಿ, ಮಂಗಳೂರು
ವಿನೀತ್ ಮಡಿಕಲ್ಸ್, ಪಡುಬಿದ್ರಿ
ವಿಶ್ವ ಟ್ರಾನ್ಸ್‌ಪೋರ್ಟ್, ಮಂಗಳೂರು
ಶ್ರೀಮತಿ ಮಧುರಾ ವ್ಯಾಸರಾಜ್ ರಾವ್, ಶ್ರೀ ಧವಳ ಎಲ್ಲೂರು

ಬನ್ನಿ... ಶುಭ ನುಡಿದು ಪ್ರೋತ್ಸಾಹಿಸಿ...

ಉತ್ತರ ಹಾಗೂ ದಕ್ಷಿಣ ಭಾರತೀಯ ಶೈಲಿಯ ಖಾದ್ಯಗಳು.

ವಿಶಾಲ ಹೊರಾಂಗಣ ಹಾಗೂ ಒಳಾಂಗಣ ವ್ಯವಸ್ಥೆಯ ಉಪಾಹಾರ ಗೃಹ

ವಿಶಾಲ ಪಾರ್ಕಿಂಗ್ ವ್ಯವಸ್ಥೆ



## ಪಡುಬಿದ್ರಿ ಸ್ಥಾನಿಕ ಸಂಘದ ಪ್ರವಾಸ



ಕಳೆದ ಒಂಭತ್ತು ವರ್ಷಗಳಿಂದ ಸದಾ ಚಟುವಟಿಕೆಯಿಂದ ಕೂಡಿದ, ತನ್ನ ಕಾರ್ಯವೈಖರಿಯಿಂದ ಮನೆಮಾತಾಗಿರುವ ಸ್ಥಾನಿಕ ಬ್ರಾಹ್ಮಣ ಸಭಾ (ರಿ.) ಪಡುಬಿದ್ರಿ ಇದರ ವತಿಯಿಂದ ದಿನಾಂಕ 23–12–2018ನೇ ರವಿವಾರ ಆನೆಗುಡ್ಡೆ–ಶ್ರೀ ವಿನಾಯಕ ದೇವಸ್ಥಾನ, ಶ್ರೀ ಚಂಡಿಕಾದುರ್ಗಾಪರಮೇಶ್ವರಿ ದೇವಸ್ಥಾನ ಕುಂಭಾಶಿ, ಶ್ರೀ ಬ್ರಾಹ್ಮೀ ದುರ್ಗಾಪರಮೇಶ್ವರಿ ದೇವಸ್ಥಾನ, ಕಮಲಶಿಲೆ ಹಾಗೂ ಮಲ್ಪೆಯ ಕಡಲತೀರ ಮೊದಲಾದ ಸ್ಥಳಗಳಿಗೆ ಒಂದು ದಿನದ ಪ್ರವಾಸವನ್ನು ನಡೆಸಲಾಯಿತು.

ಹಿರಿಯರು–ಕಿರಿಯರೆನ್ನದೆ ಸುಮಾರು 75 ಜನ ಸದಸ್ಯರು ಭಾಗವಹಿಸಿದ್ದು, ನಮ್ಮ ತಂಡವು ಬೆಳಿಗ್ಗೆ 7 ಗಂಟೆಗೆ ಹೊರಟು ಪ್ರಥಮಪೂಜಿತನಾದ ಆನೆಗುಡ್ಡೆ ಶ್ರೀ ವಿನಾಯಕನ ದರ್ಶನ ಪಡೆದು, ತೀರ್ಥ–ಪ್ರಸಾದವನ್ನು ಸ್ವೀಕರಿಸಿ, ಕುಂಭಾಶಿಯ ಶ್ರೀ ಗಣೇಶ್ ರಾವ್ ಇವರ ನಿವಾಸಕ್ಕೆ ತೆರಳಿತು. ಉಡುಪಿ ಜಿಲ್ಲಾ ಬ್ರಾಹಣ ಮಹಾಸಭಾದ ಅಧ್ಯಕ್ಷರಾದ ಶ್ರೀಯುತ ಗಣೇಶ್ ರಾವ್ ಹಾಗೂ ಅವರ ಪತ್ನಿ ಮಹಿಳಾ ವಿಭಾಗದ ಅಧ್ಯಕ್ಷೆ ಹಾಗೂ ವೃತ್ತಿಯಲ್ಲಿ ಅಧ್ಯಾಪಕಿಯಾದ ಶ್ರೀಮತಿ ಶಾಂತ ಜಿ.ರಾವ್ ಇವರು ನಮ್ಮನ್ನು ಆತ್ಮೀಯವಾಗಿ ಸ್ವಾಗತಿಸಿ, ತಾವೇ ಸ್ವತಃ ತಯಾರಿಸಿದ ಹಲಸಿನೆಲೆಯ ಮೂಡೆ, ವೆಜಿಟೇಬಲ್ ಬೋಂಡಾ, ಕ್ಷೀರ, ಚಟ್ನಿ, ಸಾಂಬಾರ್, ಕಾಫಿ, ಟೀ ಹಾಗೂ ಮಕ್ಕಳಿಗೆ ಹಾಲು ಇವುಗಳನ್ನೊಳಗೊಂಡ ಉಪಹಾರವನ್ನು ನೀಡಿ ಸತ್ಕರಿಸಿದರು. ಅವರಿಗೆ ಕೃತಜ್ಞತೆಗಳನ್ನು ಅರ್ಪಿಸಿ ಬಳಿಕ ಕುಂಭಾಶಿಯ ಶ್ರೀ ಚಂಡಿಕಾ ಪರಮೇಶ್ವರಿಯ ದೇವಳಕ್ಕೆ ತೆರಳಿದೆವು. ಬಹಳ ಭವ್ಯ ಹಾಗೂ ರಮಣೀಯವಾದ ದೇವಳದ ಸೊಬಗನ್ನು ಕಂಡು ಮೂಕವಿಸ್ಮಿತರಾದೆವು. ಅಲ್ಲಿ ಪ್ರಾರ್ಥನೆಯನ್ನು ಸಲ್ಲಿಸಿ, ಮುಂದೆ ಕಮಲಶಿಲೆಯತ್ತ ಪಯಣ ಮುಂದುವರೆಸಿದೆವು. ಕುಬ್ಜಾ ನದಿಯ ತಟದಲ್ಲಿರುವ, ಭಕ್ತರ ಎಲ್ಲಾ ಅಭೀಷ್ಟಗಳನ್ನು ಈಡೇರಿಸುವ ಮಾತೆ ಶ್ರೀ ಬ್ರಾಹ್ಮೀ ದುರ್ಗಾಪರಮೇಶ್ವರಿಯು ವಿರಾಜಮಾನಳಾಗಿರುವ ದೇಗುಲದೊಳಗೆ ಪ್ರವೇಶಿಸುವಾಗಲೇ ಮೈ ನಿಮಿರೇಳಿಸುವಂತಹ ಅನುಭವ. ಅವಳ ಮನಮೋಹಕ ರೂಪವನ್ನು ಕಣ್ತುಂಬಿಕೊಂಡು, ತಮ್ಮ–ತಮ್ಮ ಶಕ್ತ್ಯಾನುಸಾರ ಸೇವೆಗಳನ್ನು ಸಲ್ಲಿಸಿ, ದೇವಳದ ಪಾಕಶಾಲೆಯ ಮೇಲ್ವಿಚಾರಕರಾದ ಶ್ರೀಯುತ ಶೇಷಗಿರಿ ಹೆಬ್ಬಾರ್‌ರನ್ನು ಭೇಟಿಯಾದೆವು. ಅವರ ನಗೆಮೊಗದ ಉಪಚಾರವನ್ನೊಳಗೊಂಡ ಮದುವೆ ಊಟವನ್ನೂ ಮೀರಿಸಿದ ಅಮ್ಮನ ಅನ್ನ–ಪ್ರಸಾದದ ರುಚಿ ಇನ್ನೂ ನಮ್ಮ ಮನಪಟಲದಲ್ಲಿ ಸ್ಮರಣೀಯವಾಗಿದೆ. ಬಳಿಕ ದೇವಳದ ಮೊಕ್ತೇಸರರನ್ನು ಭೇಟಿಯಾಗಿ ಅವರಿಗೆ ಧನ್ಯವಾದವನ್ನು ತಿಳಿಸಿ ನಮ್ಮ ಸಂಘದ ವತಿಯಿಂದ ಕಿರುಕಾಣಿಕೆಯನ್ನು ಸಲ್ಲಿಸಿದೆವು. ಬಳಿಕ ದೇವಳದ ಗೈಡ್ ಮಂಜುನಾಥ್ ಇವರು ಕಮಲಶಿಲೆಯ ಸ್ಥಳಪುರಾಣ, 'ಸುಪಾರ್ಶ್ವ ಗುಹೆ'ಯ ಬಗ್ಗೆ ವಿವರಣೆ ನೀಡಿ ಗುಹೆಯನ್ನು ವೀಕ್ಷಿಸಲು ಸಂಪೂರ್ಣ ಸಹಕಾರವಿತ್ತರು.

ಅಲ್ಲಿಂದ ಹಿಂತಿರುಗಿ ನಾವು ಮಲ್ಪೆ ಬೀಚ್‌ಗೆ ಬರುವ ಸಂದರ್ಭದಲ್ಲಿ ಉಡುಪಿ ಸಂಘದ ಪೂರ್ವಾಧ್ಯಕ್ಷರಾದ ಶ್ರೀಯುತ ಪ್ರಫುಲ್ಲಚಂದ್ರ ರಾವ್ ಇವರು ಬೀಚ್‌ನಲ್ಲಿಯೇ ಸಾಯಂಕಾಲದ ಉಪಹಾರವನ್ನು ವ್ಯವಸ್ಥೆಗೊಳಿಸಿದ್ದರು. ಎಲ್ಲರೂ ಒಟ್ಟಾಗಿ ಪ್ರವಾಸ ಮಾಡುವುದು ಸಂಘಟನೆಯ ಹಿತದೃಷ್ಟಿಯಿಂದ ಬಹಳ ಒಳ್ಳೆಯದು ಎಂದು ತಿಳಿಸಿದರು. ಅವರಿಗೆ ಧನ್ಯವಾದವನ್ನು ಅರ್ಪಿಸಿ ಊರಿಗೆ ಮರಳಿದೆವು.

ಪಡುಬಿದ್ರಿಯ ಸ್ಥಾನಿಕ ಸಂಘದ ಸದಸ್ಯರನ್ನು ನವೋತ್ಸಾಹಗೊಳಿಸಲು ಎಲ್ಲರೂ ಒಂದಾಗಿ ಸಂಭ್ರಮಿಸುವ ದೃಷ್ಟಿಯಿಂದ ಕೈಗೊಂಡ ಈ ಪ್ರವಾಸದ ಕ್ಷಣಗಳು ನಮ್ಮ ಮನಃಪಟಲದಲ್ಲಿ ಇನ್ನೂ ಹಸಿರಾಗಿದೆ.

**ವರದಿ : ರಮ್ಯಾ ಅರುಣ್ ರಾವ್, ಮುಂಡ್ಕೂರು**

## ಅಮ್ಮ–ಜೋಕುಳ್ನೋ ಪೊರ್ಲುದೊ ಕೂಟ



ಸ್ಥಾನಿಕ ಬ್ರಾಹ್ಮಣ ಸಭಾ (ರಿ.) ಪಡುಬಿದ್ರಿ ಇದರ ಮಹಿಳಾ ವೇದಿಕೆಯ ವತಿಯಿಂದ ವರ್ಷಂಪ್ರತಿ ನಡೆಸುವ 'ಅಮ್ಮ–ಜೋಕುಳ್ನೋ ಪೊರ್ಲುದೊ ಕೂಟ' ಕಾರ್ಯಕ್ರಮವು ಅಮ್ಮ–ಮಗನ ವಿಶಿಷ್ಟ ಸಾನಿಧ್ಯವಾದ ಪಡುಬಿದ್ರಿಯ ಶ್ರೀ ಬಾಲಗಣಪತಿ–ಪ್ರಸನ್ನ ಪಾರ್ವತಿ ದೇವಳದ ಸಭಾಂಗಣದಲ್ಲಿ ದಿನಾಂಕ 18–11–2018 ರವಿವಾರ ನಡೆಯಿತು.

ಮಹಿಳಾವೇದಿಕೆಯ ಐದು ಜನ ಹಿರಿಯ ಮಾತೆಯರಾದ ಪಡುಬಿದ್ರಿಯ ಶ್ರೀಮತಿ ಲತಾ ವಾಸುದೇವ ರಾವ್ ಶ್ರೀಮತಿ ಸುನೀತಾ ಶೇಖರ್ ರಾವ್, ಶ್ರೀಮತಿ ಪ್ರಸನ್ನ ಮೋಹನ್ ರಾವ್, ಪಾದೆಬೆಟ್ಟಿನ ಶ್ರೀಮತಿ ಸುಮಿತ್ರಾ–ಸುಬ್ರಾಯ ಶ್ಯಾನುಭಾಗ್, ಹಾಗೂ ನಂದಿಕೂರಿನ ಶ್ರೀಮತಿ ಶುಭಾ ಜನಾರ್ಧನ ರಾವ್ ಇವರು ದೀಪ ಬೆಳಗಿಸುವುದರೊಂದಿಗೆ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಅಂತೆಯೇ ಪುಟಾಣಿ ಉಜ್ವಲ್ ಸುರೇಶ್ ರಾವ್ ತನ್ನ ಅಪ್ಪ, ಅಮ್ಮ ಹಾಗೂ ಅಜ್ಜಿ ಶ್ರೀಮತಿ ಸತ್ಯವತಿ ಸಿ ರಾವ್ ಇವರೊಂದಿಗೆ ಕ್ರಿಕೆಟ್ ಆಡುವುದರೊಂದಿಗೆ ಸ್ಪರ್ಧೆಗೆ ಚಾಲನೆ ನೀಡಿದನು. ಲಘು ಉಪಹಾರದ ಬಳಿಕ ವಯೋಮಾನಕ್ಕನುಗುಣವಾಗಿ ಮಕ್ಕಳಿಗೆ, ಮಹಿಳೆಯರಿಗೆ ಹಾಗೂ ಪುರುಷರಿಗೆ ವಿವಿಧ ಅದೃಷ್ಟದ ಆಟಗಳನ್ನು ನಡೆಸಲಾಯಿತು.

ಅಪರಾಹ್ನ ಭೋಜನದ ಬಳಿಕ ಉಳಿದ ಸ್ಪರ್ಧೆಗಳನ್ನು ನಡೆಸಿ ಬಳಿಕ ಸಮಾರೋಪ ಹಾಗೂ ಬಹುಮಾನ ವಿತರಣೆ ಕಾರ್ಯಕ್ರಮವು ನಡೆಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸ್ಥಾನಿಕ ಬ್ರಾಹ್ಮಣ ಸಭಾ (ರಿ.) ಪಡುಬಿದ್ರಿ ಇದರ ಅಧ್ಯಕ್ಷರಾದ ಶ್ರೀ ಎಂ.ಕೆ. ಮೋಹನ್ ರಾವ್ ಇವರು ವಹಿಸಿದರೆ, ಮುಖ್ಯ ಅತಿಥಿಗಳಾಗಿ ನಮ್ಮ ಸಮಾಜದ ಅಂತರಾಷ್ಟ್ರೀಯ ಕ್ರೀಡಾಪಟು ಹಿರಿಯ ನಾಗರಿಕರ ವಿಭಾಗದಲ್ಲಿ ಅನೇಕ ಸುವರ್ಣ ಪದಕಗಳನ್ನು ಪಡೆದ ಶ್ರೀ ವೈ.ಕುಮಾರಸ್ವಾಮಿ ಹಾಗೂ ಮಕ್ಕಳ ಪರವಾಗಿ ಶ್ರೀ ಜಗದಾಭಿರಾಮ ಸ್ವಾಮಿ ಮತ್ತು ಶ್ರೀಮತಿ ಸುರೇಖ ದಂಪತಿಗಳ ಪುತ್ರಿ ಕುಮಾರಿ ಶ್ರೀ ಲಕ್ಷ್ಮೀ ಇವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಮಹಿಳಾ ವೇದಿಕೆಯ ಅಧ್ಯಕ್ಷೆ ಇನ್ನದ ಶ್ರೀಮತಿ ವೇದಾವತಿ ಲಕ್ಷ್ಮೀಕಾಂತ ರಾವ್ ಹಾಗೂ ಸಂಚಾಲಕಿ ಶ್ರೀಮತಿ ಶಶಿಕಲಾ ರಾಮರಾವ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕು.ಶರಣ್ಯಳ ಪ್ರಾರ್ಥನೆಯ ಬಳಿಕ ಶ್ರೀಮತಿ ಸತ್ಯವತಿ ಚಂದ್ರಶೇಖರ್ ರಾವ್ ಇವರು ಸ್ವಾಗತಿಸಿದರು. ಶ್ರೀ ಮೋಹನ್ ರಾವ್ ಇವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಇಂತಹ ವಿಶಿಷ್ಟವಾದ ಕಾರ್ಯಕ್ರಮದಲ್ಲಿ ಸಮಾಜ ಬಾಂಧವರನ್ನು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ತಿಳಿಸಿದರು. ಕುಮಾರಿ ಶ್ರೀಲಕ್ಷ್ಮೀ ಕಾರ್ಯಕ್ರಮದ ಬಗ್ಗೆ ಮೆಚ್ಚುಗೆ ಸೂಚಿಸುತ್ತಾ ತಾಯಿ–ಮಗುವಿನ ಬಾಂಧವ್ಯದ ಬಗ್ಗೆ ವಿವರಿಸುತ್ತಾ, ಕೂಡು ಕುಟುಂಬದ ಅನುಕೂಲತೆಗಳನ್ನು ತಿಳಿಸಿದಳು. ಮುಖ್ಯ ಅತಿಥಿಗಳಾದ ಶ್ರೀ ವೈ.ಕುಮಾರಸ್ವಾಮಿ ಇವರು ಕ್ರೀಡೆಯಲ್ಲಿ ಸತತ ಅಭ್ಯಾಸವೇ ತಮ್ಮ ಈ ಸಾಧನೆಗೆ ಕಾರಣ, ಯಾವುದೇ ಕ್ಷೇತ್ರದಲ್ಲಿಯೂ ಮನಸ್ಸಿಟ್ಟು ಸಾಧನೆ ಮಾಡಿದರೆ ಗುರಿ ತಲುಪುವುದು ನಿಶ್ಚಿತ ಎಂದು ತಿಳಿಸಿದರು. ಶ್ರೀಮತಿ ಸುಮಂಗಲ ಎನ್.ಸ್ವಾಮಿ ಇವರು ಧನ್ಯವಾದವನ್ನಿತ್ತರು. ಶ್ರೀಮತಿ ರಮ್ಯಾ ಅರುಣ್ ರಾವ್ ಮತ್ತು ಶ್ರೀಮತಿ ಲಲಿತಾಂಬ ವೈ.ಶಾಸ್ತ್ರಿ ಇವರು ಕಾರ್ಯಕ್ರಮವನ್ನು ನಿರೂಪಿಸಿದರು. ಒಟ್ಟಾರೆಯಾಗಿ ಈ ಕಾರ್ಯಕ್ರಮವು ತಮ್ಮ ಎಲ್ಲಾ ಜಂಜಾಟವನ್ನು ಮರೆತು ಮೈಮನಗಳಿಗೆ ಹೊಸ ಹುರುಪನ್ನು ತರುವಂತಿತ್ತು.

**ವರದಿ : ಸೀತಾದೇವಿ ಭಾಸ್ಕರ್ ರಾವ್ ಪಡುಬಿದ್ರಿ**

ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ

**ಯೆಶೆಸ್ವೀ ಎಂಟರ್‌ಪ್ರೈಸೆಸ್**

ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ – 574 116.
ಇ–ಮೇಲ್ : udayarao42@gmail.com

Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams



**RAJESH POWER PRESS**
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

ಬಳಸಿದ ಕಾರುಗಳ ಮಾರಾಟ ಮತ್ತು ಖರೀದಿಗಾಗಿ ನಮ್ಮನ್ನು ಸಂಪರ್ಕಿಸಿ :
ಸೂಕ್ತ ಬೆಲೆಯೊಂದಿಗೆ ಉತ್ತಮ ಸೇವೆ ಲಭ್ಯ.



**N. Laxmi Prasad**



ಕಾರ್ಯಕಾರಿಣಿ ಮಂಡಳಿ ಸದಸ್ಯರು
D. K. District Used Vehicle Dealers & Agents Association (R.), Mangalore
Flat No. 103, Deepa Residency, Near Preethi Apartment
Kodiyalguttu West, Kodiyalbail, MANGALORE - 575 003
Mob. : 9845644489, 9964236997 E-mail : laxmiprasad5010@gmail.com


*With Best Complimemts From*
SRI M. SHAILESH RAO Ph : 9448624324
B.E., Civil
Civil Engineer & Contractor
**SRI MALAVIKA ASSOCIATES**
KALSANKA-UDUPI ROAD, UDUPI.
Website : shreemaalavikaassociates.com

## "ಮಕ್ಕಳ ಮನೋರಂಜನೆಗೆ-ಬೌದ್ಧಿಕಶಕ್ತಿಗೆ ನೂರಾರು ಮಕ್ಕಳ ಕಥೆಗಳು"-ಒಂದು ವಿಮರ್ಶೆ

ಡಾ. ಮಾರ್ಪಳ್ಳಿ ಪ್ರಸಾದ್ ಎಂ.ಸಿ.ಎ., ಪಿ.ಹೆಚ್.ಡಿ.,

ಇಂದು ಮಕ್ಕಳಿಗೆ ಕಥೆಗಳನ್ನು ಹೇಳುವವರು ಮನೆಯಲ್ಲಿ ಯಾರು ಇಲ್ಲ. ಅಜ್ಜ ಅಜ್ಜಿ ನೇಪಥ್ಯಕ್ಕೆ ಸರಿದು ದೂರದಲ್ಲಿದ್ದಾರೆ, ತಂದೆ-ತಾಯಿಗಳಿಗೆ ಮಕ್ಕಳಿಗೆ ಕಥೆ ಹೇಳುವಷ್ಟು ಸಮಯವಿಲ್ಲ, ಸಮಯವಿದ್ದರೂ ಉತ್ತಮೋತ್ತಮ ಕಥೆಗಳನ್ನು ಹೇಳುವಷ್ಟು ಸರಕುಗಳಿಲ್ಲ. ಈ ದೃಷ್ಟಿಯಲ್ಲಿ ಮಕ್ಕಳ ಸಾಹಿತ್ಯದ ಬಗ್ಗೆ ಅತ್ಯಂತ ಆಸಕ್ತಿಯಿಂದ ಶ್ರದ್ದೆಯಿಂದ ಬರೆಯುವವರಲ್ಲಿ ಶ್ರೀ ಮಾರ್ಪಳ್ಳಿ ಆರ್ ಮಂಜುನಾಥ್ ಒಬ್ಬರು. ಮಾರ್ಪಳ್ಳಿ ಮಂಜುನಾಥರವರು ಆಹಾರ ಇಲಾಖೆಯಲ್ಲಿ ಸುಮಾರು 40 ವರ್ಷಗಳಲ್ಲಿ ನಾನಾ ಹುದ್ದೆಗಳನ್ನು ಅಲಂಕರಿಸಿ ಜೊತೆಗೆ ಲೇಖನ, ಕಥೆಬರಹಗಳನ್ನು ಬರೆದು ಒಳ್ಳೆಯ ಹೆಸರನ್ನು ಪಡೆದಿರುವ ಲೇಖಕರು.

ಇತ್ತೀಚೆಗೆ ಅಜೇಯ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್ ಶಿವಮೊಗ್ಗ ಇವರು ಶ್ರೀ ಮಾರ್ಪಳ್ಳಿ ಆರ್. ಮಂಜುನಾಥ ಬರೆದಿರುವ ಎಂಟುನೂರು ಕಥೆಗಳಲ್ಲಿ 106 ಕಥೆಗಳನ್ನು ಆಯ್ದು ಎರಡು ಸಂಪುಟಗಳಾಗಿ "ನೂರಾರು ಮಕ್ಕಳ ಕಥೆಗಳು" ಎಂದು ಪ್ರಕಟಿಸಿ, ಮಾರುಕಟ್ಟೆಗೆ ಬಿಡುಗಡೆ ಮಾಡಿರುತ್ತಾರೆ. ಇಲ್ಲಿಯ ಎರಡೂ ಸಂಪುಟಗಳಲ್ಲಿರುವ ಕಥೆಗಳಲ್ಲಿ ಈಗಿನ ಸಮಸ್ಯೆಗಳು, ಘಟನೆಗಳನ್ನು ಮಕ್ಕಳ ಮನಸ್ಸಿಗೆ ಮನಮುಟ್ಟುವಂತೆ ಬರೆಯಲಾಗಿದೆ. ಆಧುನಿಕತೆಯ ಆಕರ್ಷಣೆ, ತಾಯಿಯ ಮಮತೆ ಇತ್ಯಾದಿ ವಿಷಯಗಳ ಬಗ್ಗೆ ಮಕ್ಕಳ ಮನಸ್ಸಿಗೆ ಮುದದೊಂದಿಗೆ, ಬೌದ್ಧಿಕತೆ ಬೆಳೆಯುವಂತೆ ಬರೆಯಲಾಗಿದೆ. ಇಷ್ಟೇ ಅಲ್ಲ ಇನ್ನೂ ಹಲವಾರು ಕಥೆಗಳು ಈ ಕೃತಿಯಲ್ಲಿದೆ. ಮಾರ್ಪಳ್ಳಿಯವರ ಈ ಕೃತಿಯಲ್ಲಿ ಗಣಪತಿಗೆ ಹೆಚ್ಚಿನ ಅವಕಾಶವನ್ನು ಕಲ್ಪಿಸಿದ್ದಾರೆ. ಅನೇಕ ಕಥೆಗಳಲ್ಲಿ ಗಣಪತಿಯ




ಕಾಲ್ಪನಿಕ ಕಥೆಗಳನ್ನು ಹೆಣೆದಿದ್ದಾರೆ. ಎಷ್ಟೆಂದರೂ ಗಣಪತಿ ಮಕ್ಕಳಿಗೆ ಪ್ರಿಯವಾದ ರೂಪಹೊಂದಿದ ಮತ್ತು ಆಕರ್ಶಿಸುವವನಾಗಿರುವುದರಿಂದ ಗಣಪತಿಯನ್ನು ಕಥೆಯಲ್ಲಿ ತಂದಿರುವುದು ಮಕ್ಕಳಿಗೆ ಮುದವನ್ನು ಕೊಡುತ್ತದೆ.

ಇಂದು ಮಕ್ಕಳ ಕೃತಿಗಳು ತೀರ ಕಡಿಮೆಯಾಗುತ್ತಿರುವ ಈ ಸಂದರ್ಭದಲ್ಲಿ ಅಮೂಲ್ಯವಾದ ಕಥೆಗಳನ್ನು ಹೊಂದಿದ ಮಾರ್ಪಳ್ಳಿ ಮಂಜುನಾಥರವರ ನೂರಾರು ಮಕ್ಕಳ ಕಥೆಗಳು ಪ್ರತಿ ಮನೆ ಮನೆಯಲ್ಲು ಇದ್ದರೆ ಉತ್ತಮ. ಹಿರಿಯರಿಗೂ-ಮಕ್ಕಳಿಗೂ ಒಂದು ಉತ್ತಮ ಒಡನಾಡಿ ಕೃತಿಯಾಗ ಬಲ್ಲದು ಎನ್ನುವುದನ್ನು ಸ್ವತ: ಈ ಕೃತಿಯನ್ನು ಓದಿದವರಿಗೆ ಅನಿಸದೇ ಇರಲಾರದು. ಈ ಕೃತಿಯು ಎಲ್ಲ ಜಿಲ್ಲೆಗಳಲ್ಲು ಲಭ್ಯವಿದೆ. ಶಿವಮೊಗ್ಗದ ಅಜೇಯ ಪ್ರಿಂಟರ್ಸ್ ಅಂಡ್ ಪಬ್ಲಿಕೇಷನ್ ಇವರ ಪುಸ್ತಕ ಮಳಿಗೆಯಲ್ಲಿ ಲಭ್ಯವಿದೆ. ಸಾಹಿತ್ಯಾಸಕ್ತರು ಖರೀದಿಸ ಬಹುದಾಗಿದೆ. ಉತ್ತಮ ಕೃತಿ-ಎಂದಾ ಉತ್ತಮ ಸ್ನೇಹಿತ, ಜ್ಞಾನಿ ಎನ್ನುತ್ತಾರೆ ಬಲ್ಲವರು.

## ತಲೇಕಿಯಲ್ಲಿ ಪ್ರತಿಷ್ಠಾ ಮಹೋತ್ಸವ

-ಕನಕವಲ್ಲಿ ಎಚ್.ಕೇದಗೆ

ತಾ.12.02.2019ರಂದು ಕಡಬ ಶ್ರೀನಿವಾಸ ದೇವರು ಹಾಗೂ ಶ್ರೀ ವಿಶ್ವನಾಥ ದೇವರ ಸನ್ನಿಧಿಯಲ್ಲಿ ಶ್ರೀ ಶ್ರೀ ಶೃಂಗೇರಿ ಪೀಠದ ಮಹಾ ಜಗದ್ಗುರುಗಳವರ ದಿವ್ಯ ಹಸ್ತದಿಂದ ಪುನಃ ಪ್ರತಿಷ್ಠಾಪಿಸಲ್ಪಟ್ಟ ದಿನದಂದು "ಪ್ರತಿಷ್ಠಾ ಮಹೋತ್ಸವು" ಶ್ರೀ ವಾಗೀಶ ತಂತ್ರಿಗಳ ನೇತೃತ್ವದಲ್ಲಿ ವಿಜೃಂಭಣೆಯಿಂದ ಜರಗಿತು.



ಆ ಪ್ರಯುಕ್ತ ಶ್ರೀ ದೇವಳದಲ್ಲಿ ಬೆಳಿಗ್ಗೆ ಸುಪ್ರಭಾತದ ಬಳಿಕ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರಗಿದವು. ಸಾಯಂಕಾಲ ದುರ್ಗಾ ಪೂಜೆ ಮತ್ತು ರಂಗಪೂಜೆ ನೆರವೇರಿತು. ಮಧ್ಯಾಹ್ನ ಹಾಗೂ ರಾತ್ರಿ ಮಹಾಪೂಜೆಯ ಬಳಿಕ ಪ್ರಸಾದ ಭೋಜನ ವ್ಯವಸ್ಥೆ ಇತ್ತು.

ಸಾಯಂಕಾಲ ಸಾಂಸ್ಕೃತಿಕ ಕಾರ್ಯಕ್ರಮವನ್ನು ತಲೇಕಿ ಲಲಿತಮ್ಮ ವಿ. ರಾವ್ ಮತ್ತು ಸುಭದ್ರಮ್ಮ ಕೋಲ್ಪೆ ದೀಪ ಬೆಳಗಿಸಿ ಚಾಲನೆ ನೀಡಿದರು. ತಲೇಕಿ ಸಹೋದರಿಯರಾದ ಕನಕವಲ್ಲಿ, ವೇದವಲ್ಲಿ ಮತ್ತು ವೀಣಾ ಜೋಶಿಯವರು ಪ್ರಾರ್ಥನೆ ಹಾಡಿದರು. ಸ್ಥಳೀಯ ಪುಟಾಣಿಗಳು ವಿವಿಧ ವಿನೋದಾವಳಿ ನೃತ್ಯ ಹಾಡುಗಳಿಂದ ಮನರಂಜಿಸಿದರು. ಮಂಜುಶ್ರೀ ಅರುಣ್ ಬೆಂಗಳೂರು, ಪ್ರಜ್ವಲ ಮುಂಬಾಯಿ, ಜ್ಯೋತಿ ಮತ್ತು ಮಕ್ಕಳು ಮುಂಬಾಯಿ ನೃತ್ಯ ಕಾರ್ಯಕ್ರಮ ನೀಡಿದರು. "ಕಲಾಶ್ರೀ" ನೃತ್ಯ ಶಾಲೆ ಪಡುಬಿದ್ರಿಯ ಮಕ್ಕಳಿಂದ ಮತ್ತು ಡಾ। ಭಾಗ್ಯಶ್ರೀ ಇವರಿಂದ ಭರತನಾಟ್ಯ ನೃತ್ಯದ ಕಲಾಸೇವೆ ನೆರವೇರಿತು. ನಮ್ಮ ಸಮಾಜದ ಕ್ರೀಡಾಪಟು ಎಮ್ಲಾಳು ಕುಮಾರಸ್ವಾಮಿ ಮತ್ತು ಡಾ। ಭಾಗ್ಯಶ್ರೀ ಇವರನ್ನು ಆಡಳಿತ ಮುಕ್ತೇಸರ ಭರತೇಶ ಶರ್ಮ ಮತ್ತು ಹರ್ಷಕುಮಾರ್ ದಂಪತಿಗಳು ಸನ್ಮಾನಿಸಿದರು. ಭರತೇಶ ಶರ್ಮ ಕಲಾಸೇವೆಯಲ್ಲಿ ಭಾಗವಹಿಸಿದ ಎಲ್ಲರಿಗೂ ಸ್ಮರಣಿಕೆ ನೀಡಿದರು. ಪ್ರಕಾಶ್ ಕಡಬ ಬೆಂಗಳೂರು ಹಾಗೂ ರಾಜೇಶ ತಲೇಕಿ ಎಲ್ಲಾ ವ್ಯವಸ್ಥೆಗೆ ಸಹಕರಿಸಿದರು. ಸುರೇಶ್ ಕಡಬ ಮಂಗಳೂರು, ವೀಣಾ ಜೋಶಿಯವರು ಕಾರ್ಯಕ್ರಮ ನಿರೂಪಿಸಿದರು. ಸ್ವಾತಿ ಪ್ರಮೋದ್ ಮತ್ತು ಲಕ್ಷ್ಮೀ ನಾರಾಯಣ ಆತೂರು ಸುಶ್ರಾವ್ಯವಾಗಿ ಹಾಡನ್ನು ಹಾಡಿ ಎಲ್ಲರ ಮನ ರಂಜಿಸಿದರು. ಬಳಿಕ ಕೊಲ್ಲಂಗಾನ ಮೇಳ, ಕಾಸರಗೋಡು ಇವರಿಂದ "ಮಯೂರೇಖ ವಿಜಯ" ಯಕ್ಷಗಾನ ಬಯಲಾಟ ಜರಗಿತು. 32 ವರ್ಷಗಳಿಂದ ಈ ವಾರ್ಷಿಕೋತ್ಸವ ಪ್ರಾಯೋಜಕರಾಗಿ ಶ್ರೀಮತಿ ಕನಕವಲ್ಲಿ ಮತ್ತು ಶ್ರೀ ಹರ್ಷಕುಮಾರ್ ಕೇದಿಗೆ ಪ್ರಮೋದ್ ಆಟೋಮೊಬೈಲ್ಸ್ ಮಂಗಳೂರು ಇವರು ಸಹಕರಿಸುತ್ತಿದ್ದಾರೆ.

## ಮೋಸಗಾರರಿದ್ದಾರೆ ಬಲುಜೋಕೆ ! (ನೆನಪಿನಂಗಳದಿಂದ)

ಲೇಖಕ : ಜಿ.ಕೆ. ಕೋಲ್ಪೆ

ಕಳೆದ ವರ್ಷ ಅದೊಂದು ದಿನ ತರಕಾರಿ ತರಲು ನನ್ನ ಸ್ಕೂಟರಿನಲ್ಲಿ ಹೋಗುತ್ತಿದ್ದೆ. ಸುಮಾರು 25ರ ಮಹಾಶಯನೊಬ್ಬ ಕೈ ಅಡ್ಡ ಹಿಡಿದು ನನ್ನನ್ನು ನಿಲ್ಲಿಸಿದ. ಸಾರ್, ನೀವು ಹೆಬ್ಬಾರರ ಮಾವ ಎಂದು ಗೊತ್ತಿದೆ. ನನಗೂ ಅವರು ಪರಿಚಯ. ನಿಮ್ಮಿಂದ ಸಣ್ಣ ಸಹಾಯವಾಗಬೇಕಿದೆ. ನನ್ನ ಧನಿಗಳ 'ಪಿಕ್‌ಅಪ್' ವಾಹನವನ್ನು ಇಲ್ಲೇ ಹತ್ತಿರದ ಗ್ಯಾರೇಜ್‌ನಲ್ಲಿ ರಿಪೇರಿಗೆ ನಿನ್ನೆ ಬಿಟ್ಟದ್ದೆ. ಅದು ರೆಡಿಯಾಗಿದೆ. ಧನಿಗಳ ಮನೆ ದೂರ ಇದೆ. ಒಂದೆರಡು ಸಾವಿರ ಹಣ ಕಮ್ಮಿಯಾಗಿದೆ. ನನ್ನ ಮೋಟಾರ್ ಬೈಕ್ ಈ ಹೋಟೆಲಿನ ಎದುರು ಇದೆ. ಅದರ 'ಕೀ' ಇದು. ಇದನ್ನು ಇಟ್ಟುಕೊಂಡು ರೂ.2 ಸಾವಿರ ಕೊಡಿ. ಅರ್ಧ ಗಂಟೆಯೊಳಗೆ 'ಪಿಕ್‌ಅಪ್' ಕಳಿಸಿಕೊಟ್ಟು ಬರುತ್ತೇನೆಂದ. 'ನಾನು ಅಷ್ಟೊಂದು ಹಣ ತಂದಿಲ್ಲ. ತರಕಾರಿ ತರಲು ಹೊರಟಿದ್ದೆ ಎಂದೆ. ಸಾರ್ ನೀವು ಕಡಬ ಕಡೆಯವರು ಎಂದೂ ಗೊತ್ತಿದೆ. ನಾನು ಆ ಭಾಗದಲ್ಲಿ ಕೆಲಸ ಮಾಡಿದ್ದೇನೆಂದು ಪರಿಚಯಸ್ಥರಂತೆ ಮಾತಾಡಿ, ಕಡೆಗೆ ಇದ್ದಷ್ಟು ಕೊಡಿ ಸಾರ್, ಬಾಕಿ ವ್ಯವಸ್ಥೆ ಮಾಡಿಕೊಳ್ಳುತ್ತೇನೆಂದ. ನನಗೆ ಅನುಮಾನ ಬಂದು 'ಸಾಧ್ಯವಿಲ್ಲ' ಎಂದು ಹೇಳಿ ಹೊರಟೇ ಬಿಟ್ಟೆ. ತರಕಾರಿ ಸಹಿತ ಹಿಂತಿರುಗುವಾಗ ಹೋಟೇಲಿನ ಎದುರು ಮೋಟರ್‌ಸೈಕಲಿನ ಅಸಲಿ ವ್ಯಕ್ತಿ 'ಕೀ' ಹುಡುಕುತ್ತಾ ವಿಚಾರಿಸುತ್ತಿರುವಾಗ, ನಡೆದ ವಿಷಯ ತಿಳಿಸಿದೆ. ಈ ಹಿಂದೆ ಕೂಡಾ 'ಕೀ' ಕಳಕೊಂಡವರೊಬ್ಬರ ಬವಣೆ ಹೋಟೇಲಿನವರು ತಿಳಿಸುತ್ತಾ 'ಜಾಗರೂಕರಾಗಿರಿ' ಎಂಬ ಸಂದೇಶ ಕೊಟ್ಟರು. ಎಚ್ಚರಿಕೆ! ವಾಹನ ನಿಲ್ಲಿಸಿ (ಪಾರ್ಕ್‌ಮಾಡಿ) ಹೋಗುವಾಗ ಮರೆಯದೆ ಅದರ 'ಕೀ' ಕೊಂಡೊಯ್ಯಿರಿ! ಆದರೆ, ನನ್ನ ಬಗ್ಗೆ 'ಮಾಹಿತಿ' ಆ ಕಳ್ಳನಿಗೆ ಹೇಗೆ ಸಿಕ್ಕಿತು? ಎಂಬ ಯೋಚನೆಗೊಳಗಾದೆ. ಹೆಚ್ಚಾಗಿ ಕ್ಷೌರದ ಅಂಗಡಿಯಲ್ಲಿ (ಸೆಲೂನ್) ವಾಚಾಳಿ ಕ್ಷೌರಿಕರಿಗೆ ತಲೆ ಒಪ್ಪಿಸಿ ರಾಜಕೀಯ ಹಾಗೂ ವೈಯಕ್ತಿಕ ಪುರಾಣಗಳನ್ನು ಹೇಳುವುದು-ಕೇಳುವುದು ಕೆಲವು ಹಳೆ ತಲೆಗಳ ಅಭ್ಯಾಸ. ಇದಕ್ಕೆ ನಾನೂ ಹೊರತಾಗಿಲ್ಲ. ಬಹುಶಃ ಈ ಖದೀಮ ಮನೆ ಹತ್ತಿರದ ಸೆಲೂನಿಗೆ ಬಂದವ ನನ್ನ ಪುರಾಣ ಆಲಿಸಿರಲೂ ಬಹುದು. ಹಾಗೆಯೇ ನನಗೆ ಬಲೆಬೀಸಿರಬೇಕು. ಅಥವಾ ಅಲ್ಲೇ ಸಮೀಪ ಕಟ್ಟಡವೊಂದರ ಕಾಮಗಾರಿಗೆ ಮಣ್ಣು ಸಾಗಿಸುವ ಕೆಲಸ ಮಾಡುತ್ತಿರುವಾಗ ನನ್ನ ಚಲನ-ವಲನ ಗಮನಿಸಿರಲೂ ಬಹುದು. ಅಂತೂ ಇದರಿಂದ ಒಳ್ಳೆಯ ಪಾಠ ಕಲಿತೆ!

### ವಿಳಾಸ ಬದಲಾವಣೆ

OLD ADDRESS:
SRI N.S RAO
CORPORATION BANK SHRESHTA
BHOOMI NO 87 K.R.ROAD
BANGALORE - 560 004

**NEW ADDRESS:**
**Sri N.S.RAO, GF7, T.G.AABHARAN APTS, AKSHAYA NAGAR, YELENAHALLI MAIN ROAD, BANGALORE-560 114**

### ಅಶ್ರುತರ್ಪಣ

ಹೇ ವೀರ ಸೈನಿಕರೇ
ನಿಮಗಿದೋ ನಮನ
ತಾಯ್ನಾಡ ರಕ್ಷಣೆಗೆ
ಮುಡುಪಾಯ್ತು ಪ್ರಾಣ
  ಪಾಪಿಗಳ ಲೋಕವದು
  ನೀಚ ಪಾಕಿಸ್ತಾನ
  ಮುಂದೊಮ್ಮೆ ಕಾದಿಹುದು
  ತಕ್ಕ ಶಾಸ್ತಿಯ ಕ್ಷಣ
ಮಾತೃ ಭೂಮಿಗಾಗಿ
ಹರಿಸಿದಿರಿ ರಕ್ತ
ಶತ್ರುಗಳ ಗುಂಡಿಗೆ
ಎದೆಯೊಡ್ಡಿದಿರಿ ನೀವು
  ಭಾರತ ಭೂಶಿರ
  ಗಿರಿಶಿಖರ ಕಾಶ್ಮೀರ
  ಅದು ನಿಮ್ಮ ಕರ್ಮ ಭೂಮಿ
  ನಿಮಗದೇ ಸ್ವರ್ಗ
ತಾಯ್ನೆಲವೇ ನಿಮ್ಮೂರು
ಈ ಜನರೇ ನಿಮ್ಮವರು
ನಾವೆಲ್ಲ ತೃಣ ಸಮಾನ
ನಿಮ್ಮ ನಿಸ್ವಾರ್ಥದೆದುರು

-ಶ್ರೀಮತಿ ಗೀತಾ ಮಣಿ ಜೆ.ರಾವ್, ಪುತ್ತೂರು

## ಶ್ರೀಮತಿ. ಸ್ವಪ್ನ ಸಂತೋಷ್ ಸಾಧನೆಗೆ ಸಂದ ಗೌರವ



ಜಗತ್ತು ಕಂಡ ಮಹಾನ್ ದಾರ್ಶನಿಕರಲ್ಲಿ ಜಿದ್ದು ಕೃಷ್ಣಮೂರ್ತಿಯವರೂ ಒಬ್ಬರು. ಮಕ್ಕಳ ಶಿಕ್ಷಣದ ಕುರಿತಾದ ಇವರ ಕಾಳಜಿ ಜನಪ್ರಿಯ. "ಜೆ.ಕೆ" ಎಂದು ಕರೆಯಲ್ಪಡುತ್ತಿದ್ದ ಇವರು ತಮ್ಮ ಯೋಚನೆಯ ಧಾಟಿಯ ಮೇರೆಗೆ ಭಾರತದಲ್ಲಿ ಐದು ಶಾಲೆಗಳನ್ನು ಹಾಗು ಅಮೇರಿಕ ಮತ್ತು ಇಂಗ್ಲೆಂಡಿನಲ್ಲಿ ಒಂದೊಂದು ಶಾಲೆಯನ್ನು ಹುಟ್ಟುಹಾಕಿ ಮಕ್ಕಳ ಸಮಗ್ರ ಶಿಕ್ಷಣದ ಕುರಿತಾಗಿ ತಮಗಿರುವ ನಿಲುವನ್ನು ಪ್ರತಿಪಾದಿಸಿದ್ದಾರೆ. ಅವರ ತತ್ವಜ್ಞಾನದ ಆಧಾರದಲ್ಲಿ ಸ್ಥಾಪಿಸಲ್ಪಟ್ಟ ಈ ಎಲ್ಲಾ ಶಾಲೆಗಳು ಕೃಷ್ಣಮೂರ್ತಿ ಫೌಂಡೇಶನ್ ಇಂಡಿಯಾ (KFI) ದ ಅಡಿಯಲ್ಲಿ "ಕೆ" ಸ್ಕೂಲ್ ಗಳೆಂದೇ ಪ್ರಸಿದ್ಧಿಯನ್ನು ಹೊಂದಿವೆ.

ಬೆಂಗಳೂರಿನ "ದ ವ್ಯಾಲಿ"; ಶಾಲೆಯೂ ಅವುಗಳಲ್ಲಿ ಒಂದು. ಈ ಶಾಲೆಯಲ್ಲಿ ಕಳೆದ 17 ವರ್ಷಗಳಿಂದ ಅಧ್ಯಾಪಕಿಯಾಗಿ ಸೇವೆ ಸಲ್ಲಿಸುತ್ತಿರುವ ಶ್ರೀಮತಿ ಸ್ವಪ್ನ ಸಂತೋಷ್ ಅವರು ಶೈಕ್ಷಣಿಕ ಹಾಗು ಶೈಕ್ಷಣೇತರ ನೆಲೆಗಳಲ್ಲಿ, ಕಲೆ-ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಹಾಗು ಜಿಡ್ಡು ಸಾಹಿತ್ಯದ ಪ್ರಸರಣದಲ್ಲೂ ಅಪಾರವಾದ ಕೊಡುಗೆಯನ್ನು ನೀಡಿರುತ್ತಾರೆ. ಈ ಮೂಲಕ ವಿದ್ಯಾರ್ಥಿಗಳ ಸರ್ವೋತಮುಖ ಬೆಳವಣಿಗೆಗೆ ಸಹಕಾರಿಯಾಗಿರುವ ಇವರು ಶಾಲೆಯ ಅಭಿವೃದ್ಧಿಗೂ ಕಾರಣರಾಗಿರುತ್ತಾರೆ. ಶ್ರೀಮತಿ. ಸ್ವಪ್ನ ಸಂತೋಷ್ ಅವರ ಅವಿರತ ದುಡಿಮೆಯ ಸೇವೆಗಾಗಿ ಮತ್ತು ಅವರು ಶಿಕ್ಷಣ ಕ್ಷೇತ್ರದಲ್ಲಿ ಗೈದ ವಿಶಿಷ್ಟ ಸಾಧನೆಗಾಗಿ ಕೃಷ್ಣಮೂರ್ತಿ ಫೌಂಡೇಶನ್ ಇಂಡಿಯಾವು ಶಿಕ್ಷಣ ತಜ್ಞೆಯ ನೆಲೆಯಲ್ಲಿ ಇವರನ್ನು ಅಮೆರಿಕಾದ ಕ್ಯಾಲಿಫೋರ್ನಿಯಾ ರಾಜ್ಯದಲ್ಲಿರುವ "ಕೆ" ಸ್ಕೂಲ್ ಗೆ ಹೆಚ್ಚಿನ ಅಧ್ಯಯನಕ್ಕಾಗಿ ಏಪ್ರಿಲ್ 2019 ರಂದು ಕಳುಹಿಸಿಕೊಡುತ್ತಿದೆ. ಪ್ರಯಾಣದ ಸಂಪೂರ್ಣ ಖರ್ಚು- ವೆಚ್ಚವನ್ನು ಬೆಂಗಳೂರಿನ "ದ ವ್ಯಾಲಿ" ಶಾಲೆಯೇ ಭರಿಸಲಿದೆ. ಇದು ಶಿಕ್ಷಣ ಕ್ಷೇತ್ರದಲ್ಲಿ ಸ್ವಪ್ನ ಸಂತೋಷ್ ಅವರು ಸಲ್ಲಿಸಿದ ಅಪೂರ್ವ ಸಾಧನೆಗೆ ಸಂದ ಗೌರವವಾಗಿದೆ.

ಇವರು ಶ್ರೀ. ಶ್ರೀಕೃಷ್ಣಯ್ಯ ಅನಂತಪುರ ಹಾಗು ಜಯಶ್ರೀ ಅನಂತಪುರ ಅವರ ಸೊಸೆ ಮತ್ತು ಸಂತೋಷ್ ಅನಂತಪುರ ಅವರ ಪತ್ನಿಯಾಗಿದ್ದು, ಶ್ರೀ.ಯು.ಆರ್. ಗುರುರಾಜಮೂರ್ತಿ ಮತ್ತು ಭಾಗ್ಯಲಕ್ಮಿ ದಂಪತಿಯ ಜ್ಯೇಷ್ಠ ಪುತ್ರಿಯಾಗಿರುತ್ತಾರೆ.

## ಶ್ರೀ ವಿಷ್ಣುಮೂರ್ತಿ ದೇವಸ್ಥಾನ, ಪಾದೆಬೆಟ್ಟು, ಪಡುಬಿದ್ರಿ

ಸಮಾಜ ಬಾಂಧವರೇ,

ಶ್ರೀ ದೇವಳದಲ್ಲಿ ವರ್ಷಂಪ್ರತಿ ನಡೆಯುವ ಸ್ಥಾನಿಕ ಬ್ರಾಹ್ಮಣ ಸಭಾ (ರಿ) ಪಡುಬಿದ್ರಿ ಮತ್ತು ಶ್ರೀ ವಿಷ್ಣುಮೂರ್ತಿ ದೇವಸ್ಥಾನ (ರಿ.) ಪಾದೆಬೆಟ್ಟು ಇವರ ಸಂಯೋಜನೆಯಲ್ಲಿ ಬ್ರಹ್ಮ ಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರ ಮಾರ್ಗದರ್ಶನದಲ್ಲಿ ಶ್ರೀ ಕೃಷ್ಣರಾಜ ಭಟ್ ಹೆಜಮಾಡಿ ಇವರ ನೇತೃತ್ವದಲ್ಲಿ ತಾ.11.04.2019 ಗುರುವಾರದಿಂದ ತಾ.17.04.2019 ಬುಧವಾರದವರೆಗೆ

### ವೈದಿಕ ಶಿಬಿರ

ನಡೆಯಲಿದ್ದು ನಮ್ಮ ಸಮಾಜದ ಎಲ್ಲಾ ಪಟುಗಳು ಈ ಶಿಬಿರದ ಪ್ರಯೋಜನವನ್ನು ಪಡೆದುಕೊಳ್ಳಬೇಕಾಗಿ ವಿನಂತಿ.

**ಆಡಳಿತ ಮಂಡಳಿ, ಶ್ರೀ ವಿಷ್ಣುಮೂರ್ತಿ ದೇವಸ್ಥಾನ ಪಾದೆಬೆಟ್ಟು**
**ಮತ್ತು ಸ್ಥಾನಿಕ ಬ್ರಾಹ್ಮಣ ಸಭಾ (ರಿ) ಪಡುಬಿದ್ರೆ**

: ಶಿಬಿರದ ಪ್ರಧಾನ ಪ್ರಾಯೋಜಕರು :

**ಎಲ್ಲೂರು ಶ್ರೀ ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಕ ಮೆಮೋರಿಯಲ್ ಟ್ರಸ್ಟ್ (ರಿ). ಇನ್ನ ಎ.ಬಿ.ಸಿ.ಡಿ. ಮತ್ತು ಇ ಟ್ರಸ್ಟ್ (ರಿ), ಶ್ರೀ ಸುಬ್ರಹ್ಮಣ್ಯ ಸಭಾ ಮಂಗಳೂರು, ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ, ಕುಂಜಿಬೆಟ್ಟು, ಉಡುಪಿ**

**ವಿಶೇಷ ಸೂಚನೆ :**

1) ವಟುಗಳು ಸಂಧ್ಯಾವಂದನೆಗೆ ಬೇಕಾದ ಪಂಚಪಾತ್ರೆ ಹಾಗೂ ಸ್ವಂತಕ್ಕೆ ಬೇಕಾದ ವಸ್ತ್ರಗಳನ್ನು ಹಾಗೂ ಮಲಗಲು ಬೇಕಾದ ಹೊದಿಕೆ ಮತ್ತು ತಲೆದಿಂಬನ್ನು ತರಬೇಕು.
2) ಕಳೆದ ಬಾರಿ ಕೊಟ್ಟ ಪುಸ್ತಕವನ್ನು ತರಬೇಕು
3) ಮೊಬೈಲ್ ಫೋನ್ ಕಡ್ಡಾಯವಾಗಿ ನಿಷೇಧಿಸಲಾಗಿದೆ.
4) ಸಮಾಜ ಬಾಂಧವರು ಜಪ ಹಾಗೂ ಪೂಜಾ ಕೈಂಕರ್ಯಗಳನ್ನು ಕಲಿಯಲು ಇಚ್ಚಿಸಿದ್ದಲ್ಲಿ (ಸಮಯ ಹಾಗೂ ವಯಸ್ಸಿನ ನಿರ್ಬಂಧನೆ)ಗಳಿಲ್ಲದೆ ಕಲಿಸಿಕೊಡುವ ವ್ಯವಸ್ಥೆ ಇದೆ.

ಸಂಪರ್ಕಿಸಿ : ಶ್ರೀ ಕೃಷ್ಣರಾಜ ಭಟ್–9980195355, ಶ್ರೀ ಬಿ.ಜಯರಾಮ ರಾವ್–9844545040, ಡಾ। ವೈ.ಸುದರ್ಶನ ರಾವ್ –984513622, ಶ್ರೀ ಲಕ್ಷ್ಮೀಕಾಂತ ರಾವ್–9448156413, ಶ್ರೀ ಎಂ.ಕೆ. ದಿವಾಕರ ರಾವ್–9902169119, ಶ್ರೀ ಸುಧಾಕರ ರಾವ್ ಬೆಳ್ಳೆ–9845193103

## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

### ಈ ತಿಂಗಳ ಕಾರ್ಯಕ್ರಮಗಳು

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ
ಪ್ರತಿ ಮಂಗಳವಾರ : ಸೌಂದರ್ಯಲಹರಿ ಪಾರಾಯಣ ಸಂಜೆ 5ರಿಂದ
ಪ್ರತಿ ಶುಕ್ರವಾರ : ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ
ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ ‘‘ಪಾರಾಯಣ’’ ಸಂಜೆ ಗಂಟೆ 4-30ರಿಂದ

**ತಾ.24-03-2019 ಸಂಕಷ್ಟಹರ ಚತುರ್ಥಿಯಂದು ‘‘ಸಾಮೂಹಿಕ ಗಣಹೋಮ’’ ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

ತಾ.27-03-2019 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)

ತಾ.25-03-2019 ಮತ್ತು ತಾ.10-04-2019 ಪಂಚಮಿಯಂದು ‘‘ನಾಗದೇವರಿಗೆ ತನುಸೇವೆ’’ ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**


ಎಮ್. ದೇವಾನಂದ್ ಭಟ್
Cell : 9845644556
9483913344

ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ
ಬೆಳ್ವಾಯಿ–574213 (08258)-276177 (O)
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು – 574 164 (0824)-2256374 (O) ಮಂಗಳೂರು, ದ.ಕ.
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

Ph : 98459 92859
Ganesh Hebbar & Associates
CHARTERED ACCOUNTANT
S.M.S.P. Complex, Udupi - 576 101.



## ಹುತಾತ್ಮ ಯೋಧರಿಗಾಗಿ ಪ್ರಾರ್ಥನೆ

ಬಾರಕೂರು ಧರ್ಮಶಾಲೆ ಶ್ರೀ ಮಾಸ್ತಿಅಮ್ಮನವರ ದೇವಸ್ಥಾನದಲ್ಲಿ ಇತ್ತೀಚೆಗೆ ಪುಲ್ವಾಮದಲ್ಲಿ ಹುತಾತ್ಮರಾದ ಯೋಧರ ಆತ್ಮಕ್ಕೆ ಚಿರಶಾಂತಿ ಸಿಗಲಿ ಎಂದೂ ನಮ್ಮ ಸೈನಿಕರ, ಗಡಿಯಲ್ಲಿರುವ ಯೋಧರ ಆರೋಗ್ಯ, ಶ್ರೇಯೋಭಿವೃದ್ಧಿಯ ಕುರಿತು ವಿಶೇಷ ಪೂಜೆ ಮತ್ತು ಶ್ರೀ ಮಾಸ್ತಿದುರ್ಗಾ ಚೆಣ್ಣರ ಬಳಗದ ಮಕ್ಕಳಿಂದ ಭಜನಾ ಸೇವೆ ಜರುಗಿತು.

## ಸುಬ್ರಹ್ಮಣ್ಯ ಸಭಾದಲ್ಲಿ ಶಿವರಾತ್ರಿ



ತಾ.04.03.2019ರ ಸೋಮವಾರ ಶ್ರೀ ಸುಬ್ರಹ್ಮಣ್ಯ ಸಭಾ ಮಂಗಳೂರಿನಲ್ಲಿ ಶಿವರಾತ್ರಿಯ ಪ್ರಯುಕ್ತ ರುದ್ರಾಭಿಷೇಕ ಹಾಗೂ ಭಜನಾ ಕಾರ್ಯಕ್ರಮವು ನೆರವೇರಿತು.

## ಶೃಂಗೇರಿಯಲ್ಲಿ ಗುರುಗಳ ಭೇಟಿ

ಶ್ರೀ ಶಾರದಾ ದೇವಸ್ಥಾನ, ಕುಂಜಿಬೆಟ್ಟು, ಉಡುಪಿ ಇದರ ಕುಂಭಾಭಿಷೇಕವನ್ನು ಗುರುಗಳ ಹಸ್ತದಿಂದಲೇ ನೆರವೇರಿಸಲು ದಿನಾಂಕವನ್ನು ನಿಗದಿಸಿಕೊಳ್ಳಲು ತಾ.01.03.2019 ರಂದು ಉಡುಪಿ ಸಂಘದ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್ ಹಾಗೂ ಮಾಜಿ ಅಧ್ಯಕ್ಷರಾದ ಶ್ರೀ ಯು.ಪ್ರಫುಲ್ಲಚಂದ್ರ ರಾವ್‌ರವರ ನೇತೃತ್ವದಲ್ಲಿ ಕಾರ್ಯದರ್ಶಿ, ಮತ್ತಿತರ ಪದಾಧಿಕಾರಿಗಳು ಶೃಂಗೇರಿಗೆ ತೆರಳಿ ಗುರುಗಳನ್ನು ಭೇಟಿಯಾಗಿ ಆಶೀರ್ವಾದ ಪಡೆದರು. ಗುರುಗಳು ಫಲಮಂತ್ರಾಕ್ಷತೆಯಿತ್ತು ಅನುಗ್ರಹಿಸಿ ಶೀಘ್ರವೇ ಪಟ್ಟದ ಕಿರಿಯ ಸ್ವಾಮೀಜಿಯವರ ಮುಖಾಂತರ ಕಾರ್ಯಕ್ರಮವನ್ನು ನೆರವೇರಿಸುವಾಗಿ ತಿಳಿಸಿ ಸದ್ಯವೇ ದಿನಾಂಕವನ್ನು ನಿಗದಿಪಡಿಸುವುದಾಗಿ ತಿಳಿಸಿದರು.

## ಭಕ್ತಿಗೀತೆ–3

–ಅಪಯಶ ಬೆಂಗಳೂರು

ಕಾರ್ತಿಕೇಯ ಸ್ವಾಮಿ ರಕ್ಷಿಸೋ....ಪ್ರಾರ್ಥಿಸುವೆನು
ಕಾರ್ತಿಕೇಯ ಸ್ವಾಮಿ ರಕ್ಷಿಸೋ... ॥ಪಲ್ಲವಿ॥
ಕಾರ್ತಿಕೇಯ ಸ್ವಾಮಿ ನಿನ್ನ... ಪ್ರಾರ್ಥಿಸುವೆನು
ರಕ್ಷಿಸೆನ್ನ
ಆರ್ತನಾಗಿ ಬೇಡುತಿಹೆನು...ಪ್ರೀತಿಯಿಂದ ರಕ್ಷಿಸಯ್ಯ...
ಕಾರ್ತಿಕೇಯ ಸ್ವಾಮಿ ರಕ್ಷಿಸೋ... ॥ಅನುಪಲ್ಲವಿ॥

ಅಂದು ದುರುಳ ದನುಜರೆಲ್ಲ
ಬಂದು ಸುರರ ನಗರಿಯಲ್ಲಿ
ಗೊಂದಲವ ಮಾಡುತಿರಲು, ಗೌರಿನಂದನ ।
ಸ್ಕಂದ ಸ್ವಾಮಿ ಸುರರ ಸೈನ್ಯ
ಒಂದು ಗೂಡಿ ಬಂದು ಧುರದಿ
ಕೊಂದು ದೈತ್ಯ ಕುಲಜನರನ್ನು, ಸುರರ ಸಲಹಿದಂತ ಸ್ವಾಮಿ
ಕಾರ್ತಿಕೇಯ ಸ್ವಾಮಿ ರಕ್ಷಿಸೋ..... ।

ಇಂದುಯೆನ್ನ ಜೀವನದಲ್ಲಿ
ಕಾಮ, ಕ್ರೋಧ, ಮೋಹ, ಮತ್ಸರ
ಲೋಭ ಮದಗಳೆಂಬ ಆರು ದೈತ್ಯ ಕುಲಜರು ।
ಒಂದುಗೂಡಿ ಬಂದು ನನ್ನ
ಕಾಡಿಸುವರು ಭೇಡಿಸುವರು
ಸ್ಕಂದ ಸ್ವಾಮಿ ಬೇಡುತಿಹೆನು, ರಕ್ಷಿಸೆಂದು
ಪ್ರಾರ್ಥಿಸುವೆನು ॥2॥
ಕಾರ್ತಿಕೇಯ ಸ್ವಾಮಿ ರಕ್ಷಿಸೋ.... ।

ಶರಧಿಯನ್ನು ಮಥಿಸಿದಾಗ
ಜನಿಸಿ ಬಂದ ಗರಳವನ್ನು
ಕೊರಳೊಲಿರಿಸಿ ಮೂರು ಜಗವ ಸಲಹಿದಾತನ
ತರಳ ಕಾರ್ತಿಕೇಯನನ್ನು
ಅನವರತ ಭಜಿಸುತಿರಲು
ತರಲೆ ಜನರು ಮಾಳ್ವರೇನು? ಹರಸಿಯೆನ್ನ,
ಪೊರೆಯೊ ಸ್ವಾಮಿ।
ಕಾರ್ತಿಕೇಯ ಸ್ವಾಮಿ ರಕ್ಷಿಸೋ.... ।
ಶ್ರೀ ಶ್ರೀ ಶ್ರೀ ಸುಬ್ರಹ್ಮಣ್ಯೇಶ್ವರ

## ಮೀನ ಮಾಸದ ವಿಶೇಷ ದಿನಗಳು

| | | | |
|---|---|---|---|
| 14–03–2019 | ಮೀನ ಸಂಕ್ರಮಣ ಶ್ರೀಶಾರದಾ ದೇವಸ್ಥಾನದ ಪ್ರತಿಷ್ಠಾ ಮಹೋತ್ಸವ | 06–04–2019 | ವಿಕಾರಿ ನಾಮ ಸಂವತ್ಸರದ ವಸಂತ ಋತು, ಚೈತ್ರ ಮಾಸದ ಶುಕ್ಲಪಕ್ಷಾರಂಭ, ಚಾಂದ್ರಮಾನ ಯುಗಾದಿ, ಕಿರು ನವರಾತ್ರಿ ಆರಂಭ |
| 17–03–2019 | ಸರ್ವೈಕಾದಶಿ | | |
| 21–03–2019 | ಹುಣ್ಣಿಮೆ | 13–04–2019 | ಶ್ರೀ ರಾಮ ನವಮಿ, ಶ್ರೀ ಶಾರದಾ ದೇವಸ್ಥಾನದಲ್ಲಿ ಸಾಮೂಹಿಕ ದುರ್ಗಾನಮಸ್ಕಾರ ಪೂಜೆ |
| 22–03–2019 | ಶಿಶಿರ ಋತು, ಫಾಲ್ಗುಣ ಮಾಸದ ಕೃಷ್ಣಪಕ್ಷಾರಂಭ | | |
| 24–03–2019 | ಸಂಕಷ್ಟಹರ ಚತುರ್ಥಿ ಚಂದ್ರೋದಯ ರಾತ್ರಿ 10.01 | 14–04–2019 | ಮೇಷ ಸಂಕ್ರಮಣ |
| | | 15–04–2019 | ಸೌರಮಾನ ಯುಗಾದಿ ಸ್ಮಾರ್ತೈಕಾದಶಿ |
| 31–03–2019 | ಸರ್ವೈಕಾದಶಿ | | |
| 05–04–2019 | ಅಮಾವಾಸ್ಯೆ | 16–04–2019 | ಭಾಗವತ–ವೈಷ್ಣವೈಕಾದಶಿ |

Buying and selling shares
as easy as checking your emails
Sharekhan Online Trading Account Features:
⇨ Your bank account gets directly linked to trading account
⇨ Can do direct fund transfer from any of 11 leading banks
⇨ Choose your trading account, Classic, FastTrade, TradeTiger
⇨ Apply online for Stocks, Mutual Funds and IPO's
Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com
Sharekhan
YOUR GUIDE TO THE FINANCIAL JUNGLE
Visit : www.sharekhan.com
Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INS010606122;NSE: INS23106924)

## ಶುಭ ವಿವಾಹ

ಪರ್ಕಳದ ಶ್ರೀಮತಿ ಮಮತ ಶರ್ಮ ಮತ್ತು ಶ್ರೀ ಶಶಿಧರ ಶರ್ಮ ಪಣಂಬೂರು, ಇವರ ಸುಪುತ್ರಿ **ಪೂಜಾ** ಹಾಗೂ ನವದೆಹಲಿಯ ಶ್ರೀಮತಿ ವೀಣಾ ಮತ್ತು ಶ್ರೀ ಅನಿಲ್ ಇವರ ಪುತ್ರ **ಅಕ್ಷಯ್** ಇವರ ವಿವಾಹವು ಮಂಗಳೂರು ಮಣ್ಣಗುಡ್ಡೆಯ ಸಂಘ ನಿಕೇತನದಲ್ಲಿ ತಾ.14.02.2019 ರಂದು ನೆರವೇರಿತು.

**** ****

ಪಾದೆಬೆಟ್ಟು ಶ್ರೀಮತಿ ಮೀನಾಕ್ಷಿ ಮತ್ತು ಶ್ರೀ ಸರ್ವೋತ್ತಮರಾವ್ ಇವರ ಪುತ್ರ **ಕೃಷ್ಣರಾಜ** ಮತ್ತು ಶ್ರೀಮತಿ ವಿಶಾಲಾಕ್ಷಿ ಮತ್ತು ಶ್ರೀ ಜಯಕರ ರಾವ್ ಇವರ ಪುತ್ರಿ **ಶ್ರುತಿ** ಇವರ ವಿವಾಹವು 24-02-2019ರಂದು ಎರ್ಮಾಳು ಶ್ರೀ ಜನಾರ್ಧನ ಕಲ್ಯಾಣ ಸಭಾಂಗಣದಲ್ಲಿ ನೆರವೇರಿತು.

**** ****

ಕರಂಬಳ್ಳಿ ಶ್ರೀ ವಸಂತರಾವ್ ಮತ್ತು ಶ್ರೀಮತಿ ಶೀಲಾ ಇವರ ಪುತ್ರಿ **ವಿಜೇತಾ** ಮತ್ತು ಬೆಳಗುಂಡಿ ಶ್ರೀ ಗಂಗಾಧರ ಹೆಬ್ಬಾರ್ ಮತ್ತು ಶ್ರೀ ಶಕುಂತಲಾದೇವಿ ಇವರ ಪುತ್ರ **ಮುರಲೀಕೃಷ್ಣ** ಇವರ ವಿವಾಹವು ತಾ. 11.02.2019 ರಂದು ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು

## ಬ್ರಹ್ಮೋಪದೇಶ

ಕೊಡಂಗಳದ ಶ್ರೀ ಸಂತೋಷ ಕುಮಾರ್ ರಾವ್ ಹಾಗೂ ಸುಲಕ್ಷಣಾದೇವಿ ಇವರು ತಮ್ಮ ಪುತ್ರ **ಸುಬ್ರಹ್ಮಣ್ಯನ** ಬ್ರಹ್ಮೋಪದೇಶ ಸಮಾರಂಭವನ್ನು ಕೊಡವೂರು ಶ್ರೀ ಶಂಕರನಾರಾಯಣ ದೇವಸ್ಥಾನದಲ್ಲಿ ತಾ.21-02-2019ರಂದು ನೆರವೇರಿಸಿದರು

## ಸೀಮಂತೋನ್ನಯನ

ಅಲೆವೂರು ಶ್ರೀ ಶ್ಯಾಮರಾವ್ ಮತ್ತು ಶ್ರೀಮತಿ ಸಾವಿತ್ರಿ ದಂಪತಿಗಳು ತಮ್ಮ ಪುತ್ರ ನೀರಜ್‌ನ ಧರ್ಮಪತ್ನಿ ನೇಹಾರವರ ಸೀಮಂತೋನ್ನಯನ ಸಮಾರಂಭವನ್ನು ತಾ.17-02-2018ರಂದು ತಮ್ಮ ಸ್ವಗೃಹ "ಶಾಂತಾ"ದಲ್ಲಿ ನೆರವೇರಿಸಿದರು.

## ಗೃಹಪ್ರವೇಶ

ಮಂಗಳೂರಿನ ಶ್ರೀ ರವಿಶಂಕರ ರಾವ್ ಮತ್ತು ವಿಜಯಲಕ್ಷ್ಮಿ ದಂಪತಿಗಳು ಅಶೋಕನಗರದ ರತ್ನ ಅಪಾರ್ಟ್ ಮೆಂಟಿನ ತಮ್ಮ ಸ್ವಗೃಹ ವಿಪ್ರ ಇದರ ಪ್ರವೇಶೋತ್ಸವ ವನ್ನು ತಾ.27.01.2019 ರಂದು ನೆರವೇರಿಸಿದರು

## ಶ್ರೀ ಮ.ನಾ. ಹೆಬ್ಬಾರರ 'ಪಾಂಚಾಲೀ ಪ್ರಪಂಚ' ಬಿಡುಗಡೆ



ಹರಿದಾಸ ಶ್ರೀ ಮ.ನಾ.ಹೆಬ್ಬಾರರು ಬರೆದಿರುವ ಭಾಮಿನೀ ಷಟ್ಪದಿ ಖಂಡಕಾವ್ಯ 'ಪಾಂಚಾಲೀ ಪ್ರಪಂಚ' ಕೃತಿಯು ಇದೇ ದಿನಾಂಕ 09-02-2019ರಂದು ಜ್ಞಾನ ಮಂದಿರದಲ್ಲಿ ಬಿಡುಗಡೆಗೊಂಡಿತು. ಶ್ರೀ ಮ.ನಾ.ಹೆಬ್ಬಾರರು ಆರಂಭದಲ್ಲಿ ಸ್ವಾಗತಿಸಿ ಪ್ರಸ್ತಾವನಾ ಭಾಷಣ ಮಾಡಿ, ಈ ಕಾವ್ಯವನ್ನು ಬರೆಯುವರೆ ತನಗೆ ದೊರೆತ ಪ್ರೇರಣೆಯನ್ನು ವಿವರಿಸಿ, ಸಂದೇಶ ವಾಚನಗೈದರು. ಪ್ರೊ। ಉದ್ಯಾವರ ಮಾಧವ ಆಚಾರ್ಯ, ಡಾ। ಕಬ್ಬಿನಾಲೆ ವಸಂತ ಭಾರದ್ವಾಜ, ಡಾ। ತಲ್ಲೂರು ಶಿವರಾಮ ಶೆಟ್ಟಿಯವರು ಪ್ರಧಾನ ಅತಿಥಿಗಳಾಗಿದ್ದರು. ಚಾರ್ಟರ್ಡ್ ಎಕೌಂಟೆಂಟ್ ಶ್ರೀ. ಕೆ. ಗಣೇಶ್ ಹೆಬ್ಬಾರರು ಅತಿಥಿಗಳಿಗೆ ಹೂಗುಚ್ಛ ನೀಡಿ ಗೌರವಿಸಿದರು. ಕೊನೆಯಲ್ಲಿ ಶ್ರೀ. ಪ್ರಕಾಶ ಹೆಬ್ಬಾರರು ಧನ್ಯವಾದವಿತ್ತರು. ಶ್ರೀ. ಕೆ. ಅಶ್ವತ್ಥ ಭಾರದ್ವಾಜ ಇವರು ಕಾರ್ಯಕ್ರಮ ನಿರೂಪಿಸಿದರು. ಸ್ಥಾನಿಕ ಬ್ರಾಹ್ಮಣ ಸಂಘದ ಅಧ್ಯಕ್ಷ ಶ್ರೀ.ಕೆ. ಮಂಜುನಾಥ ಹೆಬ್ಬಾರರು ಅತಿಥಿಗಳಿಗೆ ಸ್ಮರಣಿಕೆಯನ್ನಿತ್ತು ಗೌರವಿಸಿದರು.

## ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷರಾಗಿ ಡಾ.ಅವನೀಂದ್ರನಾಥ್ ರಾವ್



ಪ್ರತಿಷ್ಠಿತ ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷರಾಗಿ ಲೇಖಕ ಡಾ.ಅವನೀಂದ್ರನಾಥ್ ರಾವ್ ಆಯ್ಕೆಯಾಗಿದ್ದಾರೆ. ಈಚೆಗೆ ನಡೆದ ಚುನಾವಣೆಯಲ್ಲಿ ಬಹುಮತಗಳಿಂದ ಆರಿಸಿ ಬಂದಿದ್ದಾರೆ. ಈ ಹಿಂದೆ ಕೋಶಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದರು. ಸದ್ಯ ಅವರು ಸಂಘದ ಮುಖವಾಣಿ 'ಅಭಿಮತ'ದ ಪ್ರಧಾನ ಸಂಪಾದಕರಾಗಿಯೂ ಕಾರ್ಯ ನಿರ್ವಹಿಸುತ್ತಿದ್ದಾರೆ.

ದೆಹಲಿ ತುಳು ಸಿರಿಯ ಸ್ಥಾಪಕ ಅಧ್ಯಕ್ಷರಾಗಿರುವ ಡಾ.ರಾವ್ ಅವರು ಕೇಂದ್ರ ಸಚಿವಾಲಯ ಗ್ರಂಥಾಲಯದ ಹಿರಿಯ ಅಧಿಕಾರಿಯಾಗಿದ್ದಾರೆ.

## ನೋಟರಿಯಾಗಿ ನೇಮಕ



ಉಪ್ಪಿನಂಗಡಿಯ ಪ್ರಸಿದ್ಧ ನ್ಯಾಯವಾದಿ ಶ್ರೀ ರವಿಕಿರಣ್ ಕೊಯಿಲ ಇವರು ಕೇಂದ್ರ ಸರಕಾರದಿಂದ ದ.ಕ. ಜಿಲ್ಲೆಯ ನೋಟರಿಯಾಗಿ ನೇಮಕಗೊಂಡಿದ್ದಾರೆ. ಇವರು ಕಳೆದ ಇಪ್ಪತ್ತು ವರ್ಷಗಳಿಂದ ನ್ಯಾಯವಾದಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಬೆಳಂಗಡಿ ಬಂಟ್ವಾಳ ಕಡಬ ತಾಲೂಕಿನ ಪಂಚಾಯತುಗಳ, ಸಹಕಾರಿಸಂಘಗಳ ಹಾಗೂ ಉಪ್ಪಿನಂಗಡಿ ಚೇಂಬರ್ ಆಫ್ ಕಾಮರ್ಸ್‌ನ ಕಾನೂನು ಸಲಹೆಗಾರರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಉಪ್ಪಿನಂಗಡಿಯ ಕೊಯಿಲ ಶ್ರೀಧರ್ ರಾವ್ ಹಾಗೂ ದಿ। ಸುಭದ್ರಾರವರ ಪುತ್ರ

## ವೈವಾಹಿಕ ಜೀವನದ ಬೆಳ್ಳಿಹಬ್ಬದ ಆಚರಣೆ

ಕಟಪಾಡಿ ಮೂಡುಬೆಟ್ಟಿನ ಶ್ರೀ ಎಮ್.ಪದ್ಮಾನಂದ ರಾವ್ ಅನಸೂಯಾ ದಂಪತಿಗಳು ಮತ್ತು ಎಮ್. ಅಶೋಕ ರಾವ್ ಶ್ರೀಮತಿ ರಾವ್ ದಂಪತಿಗಳು ತಮ್ಮ ವೈವಾಹಿಕ ಜೀವನದ ಬೆಳ್ಳಿಹಬ್ಬದ ಸಂಭ್ರಮಾಚರಣೆಯನ್ನು ಮೂಡಬೆಟ್ಟು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಸನ್ನಿಧಿಯಲ್ಲಿ ಶ್ರೀ ಸತ್ಯನಾರಾಯಣ ಪೂಜೆಯೊಂದಿಗೆ ತಮ್ಮ ಬಂಧುಬಾಂಧವರ ಜೊತೆಯಲ್ಲಿ ಆಚರಿಸಿದರು.

## ನಿಧನ

### ಶ್ರೀ ಸ್ಕಂದಸ್ವಾಮಿ ಉದ್ಯಾವರ್

ಬೆಂಗಳೂರಿನಲ್ಲಿ ವಾಸವಾಗಿದ್ದ ಶ್ರೀ ಸ್ಕಂದಸ್ವಾಮಿ ಉದ್ಯಾವರ್(ಎಸ್.ಎಸ್.ರಾವ್-84 ವರ್ಷ)ರವರು ತಾ.05.03.2019ರಂದು ಬೆಂಗಳೂರಿನ ತಮ್ಮ ಸ್ವಗೃಹದಲ್ಲಿ ನಿಧನರಾದರು. ಇವರು ದಿ।ವಿ.ಆರ್.ಉದ್ಯಾವರ್‌ರವರ ಪುತ್ರ. ಅಲೆಂಬಿಕ್ ಕಂಪೆನಿಯಲ್ಲಿ ಜನರಲ್ ಮ್ಯಾನೇಜರ್ ಆಗಿ ನಿವೃತ್ತರಾಗಿದ್ದರು. ಇವರು ಇಬ್ಬರು ಪುತ್ರಿಯರು ಹಾಗೂ ಓರ್ವ ಪುತ್ರ ಮತ್ತು ಅಪಾರ ಬಂಧುಬಾಂಧವರನ್ನು ಅಗಲಿರುತ್ತಾರೆ.

**** ****

### ಶ್ರೀಮತಿ ಸಾವಿತ್ರಿ

ಬೆಂಗಳೂರಿನ ನಿವಾಸಿ ಶ್ರೀ ಕೊಡವೂರು ಪಿ.ವೆಂಕಟರಾವ್ ಇವರ ಪತ್ನಿ ಶ್ರೀಮತಿ ಸಾವಿತ್ರಿಯವರು (80 ವರ್ಷ) ತಾ.13.02.2019ರಂದು ಸ್ವಗೃಹದಲ್ಲಿ ನಿಧನ ಹೊಂದಿದರು. ಇವರು ಪತಿ, ಇಬ್ಬರು ಪುತ್ರಿಯರು ಹಾಗೂ ಓರ್ವ ಪುತ್ರ ಮತ್ತು ಅಪಾರ ಬಂಧುಬಾಂಧವರನ್ನು ಅಗಲಿರುತ್ತಾರೆ.

**** ****

### ಬಪ್ಪನಾಡು ಚಂದ್ರಶೇಖರ ರಾವ್

ಕೋರಿಕೆಬೆಟ್ಟು ಮುಂಡ್ಕೂರು ಬಪ್ಪನಾಡು ಚಂದ್ರಶೇಖರ ರಾವ್ (80 ವರ್ಷ) ತಾ.04.03.2019ರಂದು ಪೂನಾದ ತಮ್ಮ ಸ್ವಗೃಹದಲ್ಲಿ ನಿಧನ ಹೊಂದಿದರು. ಇವರು ಓರ್ವ ಪುತ್ರ, ಓರ್ವ ಪುತ್ರಿ ಮತ್ತು ಅಪಾರ ಬಂಧುಬಾಂಧವರನ್ನು ಅಗಲಿರುತ್ತಾರೆ.



ದೇವಿಕೃಪಾ ಏಜೆನ್ಸೀಸ್, ನಂದಿಕೂರು

ಫೋನ್ : 2556536 (R), 2555466 (O), Mobile : 9845149521



ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.

ಪ್ರೊ। ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು




ಶುಭಾಶಯಗಳೊಂದಿಗೆ

ಹೆಬ್ಬಾರ್ ಎಂಟರ್‌ಪ್ರೈಸಸ್

ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.

ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.

ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894

SAMPATH KUMAR Mobile : 9741508881

TRISHULINI TOURIST

*The Tourist People*

Near Mahishamardhini Temple, Bailur, Udupi.

ALL TYPES OF VEHICLES AVAILABLE FOR HIRE

ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ, ಪಡುಬಿದ್ರಿ

ಶ್ರೀ ಭಾರತೀ ಮಂಟಪ, ಉಡುಪಿ ಜಿಲ್ಲೆ, ಉದಯಾದ್ರಿ

ನಮ್ಮಲ್ಲಿ ಎಲ್ಲಾ ಶುಭ ಸಮಾರಂಭಗಳು, ಹೋಮ ಇತ್ಯಾದಿ ಕಾರ್ಯಕ್ರಮ ನಡೆಸುವರೇ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. – ಆಡಳಿತ ಮಂಡಳಿ

ಶ್ರೀ ಉದಯಾದ್ರಿ ಮಠ, ಪಡುಬಿದ್ರಿ, ಉಡುಪಿ ಜಿಲ್ಲೆ

ನಮ್ಮಲ್ಲಿ ಔರ್ಧ್ವಕ್ರಿಯೆ, ಶ್ರಾದ್ಧ ಇತ್ಯಾದಿ ಕಾರ್ಯಕ್ರಮ ನಡೆಸುವರೇ ವ್ಯವಸ್ಥೆಯನ್ನು ಕಲ್ಪಿಸಲಾಗುವುದು.
ಸಂಪರ್ಕಿಸಿರಿ : ನಯನಾಭಿರಾಮ ಸ್ವಾಮಿ : 9449101303, ಶ್ರೀನಿವಾಸ ಶರ್ಮ : 9945933363

## ಶ್ರೀಪಾದ ಆರ್ ರಾವ್ ಇವರಿಗೆ 'ಟೇಕ್ವಾಂಡೋ' ಚಿನ್ನದ ಪದಕ



ದಿನಾಂಕ 17 ರಿಂದ 20 ಜನವರಿ ಅಂದು ಡಿಪಾರ್ಟ್ಮೆಂಟ್ ಆಫ್ ಯೂತ್ (ಹಾಸ್ಟೆಲ್) ಮಿರಮಾರ್, ಗೋವಾದಲ್ಲಿ ನಡೆದ ಅಂತರಾಷ್ಟ್ರೀಯ ಬೀಚ್ ಕಾಂಬೆಟ್ ಗೇಮ್ಸ್ 2019ರಲ್ಲಿ ಬೆಳಗಾವಿಯ ಶ್ರೀಪಾದ ಆರ್ ರಾವ್ ಅವರು ನಮ್ಮ ದೇಶವನ್ನು ಟೇಕ್ವಾಂಡೋ ಕ್ರೀಡೆಯಲ್ಲಿ ಪ್ರತಿನಿಧಿಸಿ ಚಿನ್ನದ ಪದಕ ಗೆದ್ದು ದೇಶಕ್ಕೆ ಕೀರ್ತಿ ತಂದಿರುತ್ತಾರೆ.

ವರ್ಲ್ಡ್ ಕಾಂಬೇಟ್ ಗೇಮ್ಸ್ ಕೌನ್ಸಿಲ್, ಯು.ಕೆ ಮತ್ತು ಅಲ್ಟಿಮೇಟ್ ಫೈಟ್ ಲೀಗ್ ಇವರ ಸಂಯುಕ್ತಾಶ್ರಯದಲ್ಲಿ ನಡೆದ ಪಂದ್ಯಾವಳಿಯಲ್ಲಿ ಇರಾನ್, ಯು.ಎ.ಇ, ಸೌದಿ ಅರೇಬಿಯಾ, ಬ್ರಿಟನ್, ಬಾಂಗ್ಲಾದೇಶ್, ಶ್ರೀಲಂಕಾ, ನೇಪಾಲ್, ಇಂಡೋನೇಷ್ಯಾ, ಬರ್ಮಾ, ಥೈಲ್ಯಾಂಡ್, ಯು.ಎಸ್.ಎ. ಮತ್ತು ಭೂತಾನ್ ದೇಶದ ತಂಡಗಳು ಭಾಗವಹಿಸಿದ್ದವು.

ಟೇಕ್ವಾಂಡೋ ಸ್ಪರ್ಧೆಯು ಪೂಂಸೇ ಹಾಗೂ ಕ್ಯೆರುಗಿ ಈ ಎರಡು ವಿಭಾಗ ಹೊಂದಿತ್ತು. ಕ್ಯೆರುಗಿಯ ಹಿರಿಯರ ವಿಭಾಗ ದಲ್ಲಿ ಪುರುಷರ ಯು–54ಕೆ.ಜಿ ತೂಕದಲ್ಲಿ ಭಾಗವಹಿಸಿದ ಶ್ರೀಪಾದ ಆರ್ ರಾವ್ ಅವರು ಫೈನಲ್ಸ್ ನಲ್ಲಿ ಬ್ರಿಟನ್ ನ ಕ್ರೀಡಾಪಟುವನ್ನು ಸೋಲಿಸಿ ಭಾರತಕ್ಕೆ ಚಿನ್ನದ ಪದಕಗಳಿಸುವಲ್ಲಿ ಯಶಸ್ವಿಯಾಗಿದ್ದಾರೆ.

ವಿಜೇತರಾದ ಶ್ರೀಪಾದ ಆರ್ ರಾವ್ ಅವರು ಮೂಲತಃ ಉಡುಪಿಯ ಇನ್ನಂಜೆಯ ಶ್ರೀಮತಿ ಪದ್ಮಲತ ರವಿ ರಾವ್ ಹಾಗೂ ಶ್ರೀ ರವಿ ಸದಾಶಿವ ರಾವ್ ಅವರ ಸುಪುತ್ರರಾಗಿದ್ದು ಅಂತರಾಷ್ಟ್ರೀಯ ಟೇಕ್ವಾಂಡೋ ಫೆಡರೇಷನ್ ನಿಂದ 2ನೇ ಡೆನ್ ಬ್ಲಾಕ್ ಬೆಲ್ಟ್ ಹೊಂದಿರುತ್ತಾರೆ ಹಾಗೂ ಟೇಕ್ವಾಂಡೋ ಫೆಡರೇಷನ್ ಆಫ್ ಇಂಡಿಯಾದಿಂದ ಮಾನ್ಯತೆ ಹೊಂದಿರುವ ನ್ಯಾಷನಲ್ ರೆಫರೀಯಾಗಿರುತ್ತಾರೆ. ಇವರು ಬೆಳಗಾವಿ ಜಿಲ್ಲಾ ಟೇಕ್ವಾಂಡೋ ಸಂಸ್ಥೆಯ ಖಜಾಂಚಿ ಹಾಗೂ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ, ಉಡುಪಿ ಜಿಲ್ಲಾ ಟೇಕ್ವಾಂಡೋ ಸಂಸ್ಥೆಯ ಉಪಾಧ್ಯಕ್ಷರಾಗಿ ಹಾಗೂ ಕರ್ನಾಟಕ ಟೇಕ್ವಾಂಡೋ ಸಂಸ್ಥೆಯ ತಾಂತ್ರಿಕ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಇವೆಲ್ಲಾ ಹೊರತುಪಡಿಸಿ ಇವರು ರಾವ್ಸ್ ಯುವ ಅಕಾಡೆಮಿ ಎಂಬ ಸಂಸ್ಥೆ ಸ್ಥಾಪಿಸಿ 2012 ರಿಂದ ಬಡ ಮಕ್ಕಳಿಗೆ ಉಚಿತ ಟೇಕ್ವಾಂಡೋ ತರಬೇತಿ ನೀಡುತ್ತಿದ್ದಾರೆ.

## ವೈವಾಹಿಕ ಜೀವನದ ಬೆಳ್ಳಿಹಬ್ಬದ ಶುಭಾಶಯಗಳು



ಶ್ರೀ ಎಮ್.ಪದ್ಮಾನಂದ ರಾವ್ ಮತ್ತು ಅನುಸೂಯ ರಾವ್



ಶ್ರೀ ಎಮ್.ಅಶೋಕ್ ರಾವ್ ಮತ್ತು ಶ್ರೀಮತಿ ರಾವ್

ಶುಭ ಕೋರುವ :

**ಶ್ರೀಮತಿ ಅಂಕಿತ ವಿಘ್ನೇಶ್ ಕುಮಾರ್, ಆಶ್ಲೇಷ್ ರಾವ್, ಅಭಿಷೇಕ್ ರಾವ್, ಅಶ್ವಿತಾ ರಾವ್, ಅಮಿತಾ ರಾವ್ ಮತ್ತು ಬಂಧುಮಿತ್ರರು**

## ಬಹುಮುಖ ಪ್ರತಿಭೆ ರಾಧಿಕಾ ರಾವ್ ಪಾಟೀಲರಿಗೆ ಶ್ರದ್ಧಾಂಜಲಿ



ಜನನ : 01–08–1970
ನಿಧನ : 21–12–2018

ಬೆಳಗಾವಿಯ ಶ್ರೀಮತಿ ರಾಧಿಕಾ ರಾವ್ ಪಾಟೀಲರವರು ತಾ.21–12–2018ರಂದು ನಿಧನ ಹೊಂದಿದರು. ಇವರು ಉಡುಪಿ ಉಂಡಾರಿನ ದಿ| ಐ.ಆರ್.ಅಣ್ಣಾ ರಾವ್ ಮತ್ತು ಶ್ರೀಮತಿ ಸುಲೋಚನಾ ರಾವ್ ದಂಪತಿಗಳ ಪುತ್ರಿ. ಬಹುಮುಖ ಪ್ರತಿಭೆಯ ಇವರು ಬೆಳಗಾವಿಯ ಕನ್ನಡ ಸಂಘದಲ್ಲಿ ಸಕ್ರಿಯರಾಗಿದ್ದರು ಹಾಗೂ ಪ್ರತಿ ವರ್ಷ ಭುವನೇಶ್ವರಿ ಉತ್ಸವ, ಕನ್ನಡ ಮಹಿಳಾ ಸಂಘದಲ್ಲಿ ಮುಖ್ಯ ಭೂಮಿಕೆಯಲ್ಲಿ ನಿರ್ವಹಣೆಯನ್ನು ಮಾಡುತ್ತಿದ್ದರು. ಇವರು ಯಕ್ಷಗಾನ ಕಲಾವಿದೆಯಾಗಿದ್ದರು. ಕಂಸವಧೆಯಲ್ಲಿನ ಇವರ ಕಂಸ ಪಾತ್ರ ಪ್ರಸಿದ್ಧವಾಗಿತ್ತು. ಅದೇ ರೀತಿ ನಾಟಕ–ಸಂಗೀತೋತ್ಸವದಲ್ಲಿಯೂ ಭಾಗವಹಿಸುತ್ತಿದ್ದರು.

"ಪ್ರಯತ್ನ" ಎಂಬ ಸಂಘವನ್ನು ಹುಟ್ಟುಹಾಕಿ ಮಹಿಳೆಯರನ್ನೆಲ್ಲಾ ಒಗ್ಗೂಡಿಸಿ ಪ್ರತಿ ಎರಡು ತಿಂಗಳಿಗೊಮ್ಮೆ ಬಡ ಮಕ್ಕಳಿಗೆ, ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗೆ, ಶೈಕ್ಷಣಿಕ ಸಹಾಯ, ವಿದ್ಯಾರ್ಥಿಗಳಿಗೆ ಉಚಿತ ಸಮವಸ್ತ್ರ ಹಂಚಿಕೆ, ಜೈಲಲ್ಲಿ ಖೈದಿಗಳಿಗೆ ಪ್ರತಿವರ್ಷ ಉಚಿತ ಸ್ವೆಟರ್ ಹಂಚಿಕೆ ಇತ್ಯಾದಿಗಳನ್ನು ಮಾಡುತ್ತಿದ್ದರು. "ಶಾಂತಾ ತಾಯಿ ವೃದ್ಧಾಶ್ರಮ"ವನ್ನು ಸ್ಥಾಪಿಸಿ ವೃದ್ಧರು ವೃದ್ಧೆಯರ ಪಾಲನೆ ಮಾಡುತ್ತಿದ್ದರು. ಸ್ಥಳೀಯ ಶಾಸಕರ ನೇತೃತ್ವದಲ್ಲಿ ಪ್ರತೀ ವರ್ಷ ನಡೆಯುವ ಗಾಳಿಪಟ ಹಾರಾಟ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆಯುತ್ತಿದ್ದುದು ಮಾತ್ರವಲ್ಲ, ಇತರರನ್ನೂ ಪ್ರೋತ್ಸಾಹಿಸುತ್ತಿದ್ದರು. ಅದೇ ರೀತಿ "ರಾಗರಂಜಿನಿ" ಎಂಬ ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಸಂಗೀತ ಕಾರ್ಯಕ್ರಮವನ್ನು ಪ್ರತಿ ವರ್ಷ ನಡೆಸುತ್ತಿದ್ದರು.

ಶ್ರೀಮತಿ ರಾಧಿಕಾ ರಾವ್ ಪಾಟೀಲರ ಎಲ್ಲಾ ಚಟುವಟಿಕೆಯಲ್ಲಿ ಅವರಿಗೆ ಹೆಗಲಿಗೆ ಹೆಗಲು ಕೊಟ್ಟು ಬೆನ್ನೆಲುಬಾಗಿ ಶ್ರಮಿಸಿದವರು ಶ್ರೀ ವೆಂಕಟೇಶ ಸರನೋಬತ್ ಮತ್ತು ಅವರ ಧರ್ಮಪತ್ನಿ ಶ್ರೀಮತಿ ಗೌರಿ ಸರನೋಬತ್. ಶ್ರೀ ವೆಂಕಟೇಶ ಸರನೋಬತ್ ದಂಪತಿಗಳ ಸಹಕಾರ, ಸಲಹೆಯೊಂದಿಗೆ ಸಾಮಾಜಿಕ, ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಜನ ಸೇವೆ ಮಾಡುತ್ತಾ ಬಂದಿದ್ದುದು ಮಾತ್ರವಲ್ಲದೆ ಬೆಳಗಾವಿಯ ಕಾಲೇಜಿನ ಹಳೇ ವಿದ್ಯಾರ್ಥಿ ಸಂಘದ ಪದಾಧಿಕಾರಿಯೂ ಆಗಿದ್ದರು. ಶ್ರೀಮತಿ ರಾಧಿಕಾ ಪಾಟೀಲರು ಭವಿಷ್ಯದಲ್ಲಿ ತನ್ನ ಪತಿ ದಿ. ಮಹೇಶ ಪಾಟೀಲರ ಹೆಸರಿನಲ್ಲಿ "ಮಹೇಶ ಪಾಟೀಲ ಫೌಂಡೇಶನ್"ನ್ನು ಸ್ಥಾಪಿಸಿ ಆ ಮೂಲಕ ಬಡ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಹಾಗೂ ಆರ್ಥಿಕ ಸಹಾಯ ಒದಗಿಸಲೂ ಯೋಜನೆ ಹಾಕಿಕೊಂಡಿದ್ದರು.


ಹೀಗೆ ಕಿರು ಅವಧಿಯಲ್ಲಿ ಹಲವಾರು ಚಟುವಟಿಕೆಗಳ ಮೂಲಕ ಅಬಲರ ಸೇವೆಗೈಯುತ್ತಾ ಹಲವಾರು ರಂಗಗಳಲ್ಲಿ ಸಾಧನೆಗೈದ ಶ್ರೀಮತಿ ರಾಧಿಕಾ ರಾವ್ ಪಾಟೀಲರ ಅಕಾಲಿಕ ನಿಧನಕ್ಕೆ ಸಂತಾಪಸೂಚಿಸುತ್ತಾ ಉಂಡಾರು ಕುಟುಂಬಸ್ಥರಾದ ನಾವು ಅವರ ಸದ್ಗತಿಗಾಗಿ ಶ್ರೀದೇವರಲ್ಲಿ ಪ್ರಾರ್ಥಿಸುತ್ತೇವೆ.

## ಎರ್ಮಾಳು ವಾಸುದೇವ ರಾವ್ ಮತ್ತು ಸಾಂತೂರು ಸದಾಶಿವ ರಾವ್ ಇವರಿಗೆ ಗೌರವಾರ್ಪಣೆ





# ಭರತನಾಟ್ಯ ಪರೀಕ್ಷೆ: ಕರ್ನಾಟಕ ರಾಜ್ಯಕ್ಕೆ ಪ್ರಥಮ



ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿ, ಬೆಂಗಳೂರು, ಇವರು ನಡೆಸಿರುವ 2017–18 ನೇ ಸಾಲಿನ ಭರತನಾಟ್ಯ ಸೀನಿಯರ್ ಗ್ರೇಡ್ ಪರೀಕ್ಷೆಯಲ್ಲಿ ಮಣಿಪಾಲ ಮಾಧವಕೃಪಾ ಶಾಲೆಯಲ್ಲಿ 10 ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರೇರಣಾ ಎಂ ರಾವ್, ಶೇ. 96 ಅಂಕ ಪಡೆದು ಕರ್ನಾಟಕ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿದ್ದಾರೆ. ಉಡುಪಿಯ ಹೆಜ್ಜೆ– ಗೆಜ್ಜೆ ನೃತ್ಯ ಸಂಸ್ಥೆಯ ವಿದುಷಿ ಶ್ರೀಮತಿ ಯಶಾ ರಾಮಕೃಷ್ಣ ಅವರ ಶಿಷ್ಯೆಯಾಗಿರುವ ಇವರು, ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ, ಶ್ರೀ ಶಾರದಾ ಮಂಟಪ, ಉಡುಪಿಯ ನಿರ್ದೇಶಕರಾದ ಡಾ. ಸಂತೋಷ ರಾವ್ ಹಾಗೂ ಮಹಿಳಾ ವೇದಿಕೆಯ ಸಂಚಾಲಕಿಯಾದ ಪ್ರೀತಿ ಎಸ್. ರಾವ್ ದಂಪತಿಯ ಪುತ್ರಿ.

# ಬೆಳುವಾಯಿ ಕು। ಶುಭಾಂಜನಾಳಿಗೆ "ಗಾನ ದೀಕ್ಷಾ ಪ್ರದಾನ"



ಕಲೆಯನ್ನೇ ಉಸಿರಾಗಿಸಿಕೊಂಡು ಬಂದ ಕಲಾವಿದ ದಿ। ಕೆ. ಸುಬ್ರಾಯ ಭಟ್ ಅವರ ಸುಪುತ್ರ ಕಲಾವಿದ ಎಮ್. ದೇವಾನಂದ ಭಟ್‌ರ ಸುಪುತ್ರಿ ಕು। ಶುಭಾಂಜನ ಕಲಾ ಸಾಧನೆಯ ಹಾದಿಯಲ್ಲಿ ಮುಂದುವರಿಯುತ್ತಿರುವ ಚಿಗುರು ಪ್ರತಿಭೆ. ಇವಳಿಗೆ ಅವಳ ಭಾಗವತಿಯ ಗುರುಗಳಾದ ಶ್ರೀಮತಿ ಲೀಲಾವತಿ ಬೈಪಾಡಿತ್ತಾಯ, ಶ್ರೀ ರವಿಚಂದ್ರ ಕನ್ನಡಿಕಟ್ಟೆಯವರು, ತಾಯಿ ಶ್ರೀಮತಿ ವೀಣಾ, ತಂದೆ ದೇವಾನಂದ ಭಟ್, ಮಾವ ಪ್ರಸಿದ್ಧ ಭಾಗವತರಾದ ಶ್ರೀ ಚಂದ್ರಕಾಂತ ಮೂಡುಬೆಳ್ಳೆಯವರ ಸಮ್ಮುಖದಲ್ಲಿ ತಂದೆ ದೇವಾನಂದ ಭಟ್ ಅವರ ಉದ್ಯಮ "ಶೋಭಾ ಸ್ಟುಡಿಯೋದ" 25ರ ಸಂಭ್ರಮದ ಸಂದರ್ಭದಲ್ಲಿ ಅವಳ ಗುರು ಶ್ರೀ ರವಿಚಂದ್ರ ಕನ್ನಡಿಕಟ್ಟೆಯವರಿಂದ "ಗಾನ ದೀಕ್ಷಾ ಪ್ರದಾನ" (ಜಾಗಟೆ ನೀಡಿ ರಂಗದಲ್ಲಿ ಭಾಗವತಿಕೆ ಮಾಡಲು ಅನುಗ್ರಹಿಸುವುದು) ಕಾರ್ಯಕ್ರಮವು ಬೆಳುವಾಯಿ ಸ್ವಗ್ರಹ 'ಅಂಜನಾಶ್ರೀ'ಯಲ್ಲಿ ಜರಗಿತು. ಆ ಪ್ರಯುಕ್ತ ಚಂಡಿಕಾ ಹೋಮ, ರಾತ್ರಿ ಕಟೀಲು ಮೇಳದವರಿಂದ 'ಶ್ರೀ ದೇವಿ ಮಹಾತ್ಮೆ' ಯಕ್ಷಗಾನ ಜರಗಿತು. ರಾತ್ರಿ ಕಟೀಲು ಮೇಳದಲ್ಲೂ ಸೇವಾರೂಪವಾಗಿ ಭಾಗವತಿಕೆ ಮಾಡಿ ಜನಮನ ರಂಜಿಸಿದಳು. ಯುವಪ್ರತಿಭೆ ಕು। ಶುಭಾಂಜನಾಳಿಗೆ ನಮ್ಮೆಲ್ಲರ ಶುಭ ಹಾರೈಕೆಗಳು.

# ಶಾಂತಾ ಬಾರ್ಕೂರುರವರಿಗೆ ಜ್ಞಾನಸಿಂಧು ರಾಜ್ಯ ಪ್ರಶಸ್ತಿ



ವಿಟ್ಲ : ಬಂಟ್ವಾಳ ತಾಲೂಕಿನ ಕನ್ಯಾನ ಸರಕಾರಿ ಪದವಿಪೂರ್ವ ಕಾಲೇಜಿನ ಕನ್ನಡ ಭಾಷಾ ಶಿಕ್ಷಕಿ ಶಾಂತಾ ಬಾರ್ಕೂರು ಇವರು 2018ನೇ ಸಾಲಿನ ಜ್ಞಾನಸಿಂಧು ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಇವರು ಬಾರ್ಕೂರಿನ ಮಸ್ಕಿಬೈಲು ದಿ। ನಾರ್ಣಪ್ಪಯ್ಯ ಮತ್ತು ಶ್ರೀಮತಿ ಭಾಗೀರಥಿಯಮ್ಮನವರ ಮಗಳು. ಪ್ರಕೃತ ಇವರು ಪುತ್ತೂರಿನ ನಿವಾಸಿಯಾಗಿದ್ದು ಪುತ್ತೂರು ಎಂ.ಕೆ.ಚಂದ್ರಶೇಖರ ರಾಯರ ಪತ್ನಿಯಾಗಿರುತ್ತಾರೆ.

ಪ್ರತಿಷ್ಠಿತ ಶಿಕ್ಷಣ ಜ್ಞಾನ ಪತ್ರಿಕೆಯ ಸಹಯೋಗದೊಂದಿಗೆ ಸಾಹಿತ್ಯ, ಶೈಕ್ಷಣಿಕ ರಂಗದಲ್ಲಿ ವಿಶಿಷ್ಟ ಸೇವೆ ಸಲ್ಲಿಸಿ ಕರ್ತವ್ಯ ನಿರ್ವಹಿಸುತ್ತಿರುವ ಸಾಧಕರನ್ನು ಗುರುತಿಸಿ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ.

ಇವರು ಕನ್ನಡ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವೀಧರೆಯಾಗಿದ್ದು ಕಳೆದ 25 ವರ್ಷಗಳಿಂದ ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ನಲಿ–ಕಲಿ ಯೋಗ ಶಿಕ್ಷಣದ ರಾಜ್ಯ ಸಂಪನ್ಮೂಲ ವ್ಯಕ್ತಿಯಾಗಿದ್ದು ರಾಜ್ಯ ಮಟ್ಟದ ಯೋಗಾಸನ ತೀರ್ಪುಗಾರರಾಗಿದ್ದಾರೆ. ಶಾಂತಿವನ ಟ್ರಸ್ಟ್ ಯೋಗ ಮತ್ತು ನೈತಿಕ ಶಿಕ್ಷಣ ಯೋಜನೆ ಧರ್ಮಸ್ಥಳ ಇದರ ಬಂಟ್ವಾಳ ತಾಲೂಕು ಯೋಗ ಸಂಘಟನೆ ಹಾಗೂ ಭಾರತ್ ಸ್ಕೌಟ್–ಗೈಡ್ಸ್ ಸಂಸ್ಥೆ ವಿಟ್ಲ ಇದರ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸಿದ್ದು ವಿದ್ಯಾರ್ಥಿಗಳನ್ನು ತೃತೀಯ ಸೋಪಾನ ಪರೀಕ್ಷೆ ತನಕ ತರಬೇತುಗೊಳಿಸಿರುತ್ತಾರೆ. ಕನಸು ಕ್ಲಸ್ಟರ್ ಪತ್ರಿಕೆಯ ಸಂಪಾದಕಿಯಾಗಿ ಸೇವೆ ಸಲ್ಲಿಸಿದ್ದು ಯೋಗದಲ್ಲಿ ಡಿಪ್ಲೋಮಾ ಶಿಕ್ಷಣ ಪಡೆದಿದ್ದು ಯೋಗ ಭೂಷಣ ಪ್ರಭೋದ ಪರೀಕ್ಷೆ ಉತ್ತೀರ್ಣರಾಗಿ ಯೋಗ ಭೂಷಣ ಪ್ರಶಸ್ತಿ ಚಿನ್ನದ ಪದಕ ಪಡೆದಿರುತ್ತಾರೆ. ಪಂಚಮುಖಿ ವ್ಯಕ್ತಿತ್ವ ವಿಕಸನ, ಜೀವನ ವಿಜ್ಞಾನ, ಕ್ರಿಯಾ ಸಂಶೋಧನೆ, ಕಿಶೋರಿ, ಶಾಲಾಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಂಪನ್ಮೂಲ ವ್ಯಕ್ತಿಯಾಗಿ ಹಲವು ತರಬೇತಿ ಮಾಡಿದ್ದು ಸಾರ್ವಜನಿಕರಿಗೆ ಯೋಗ ಶಿಕ್ಷಣ ನೀಡಿರುತ್ತಾರೆ. ಗಮಕ ಕಲಾ ಪರಿಷತ್ತು, ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ವಿವಿಧ ಸಾಹಿತ್ಯ, ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿದ್ದು ವಿದ್ಯಾರ್ಥಿಗಳನ್ನು ತೊಡಗಿಸಿರುತ್ತಾರೆ. ಬಂಟ್ವಾಳ ತಾಲೂಕು ಶಿಕ್ಷಕರ ದಿನಾಚರಣೆ ಸಂದರ್ಭದಲ್ಲಿ ಅತ್ಯುತ್ತಮ ಸಾಧಕ ಶಿಕ್ಷಕಿ ಪುರಸ್ಕಾರ ಪಡೆದಿರುತ್ತಾರೆ.


**With Best Compliments From :**




**With Best Compliments From :**





Owned, Published & Edited by : Sri Y. Muralikrishna Rao onbehalf of Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org